೨೪೮ ಉಪನ್ಯಾಸ ಗ್ರಂಥಮಾಲೆ

# ಕವಯಿತ್ರಿ ಮಹಾದೇವಿ ವರ್ಮಾ

ಶ್ರೀ ಎಸ್. ಜಿ. ಇಟಗಿ

ಕರ್ನಾಟಕ ವಿಶ್ವವಿದ್ಯಾಲಯ

ನವಂಬರ, ೧೯೭೬

ರಜತಮಹೋತ್ಸವದ ಪ್ರಕಟನೆ

ಉಪನ್ಯಾಸ ಗ್ರಂಥಮಾಲೆ

೨೪೮

# ಕವಯಿತ್ರಿ ಮಹಾದೇವಿ ವರ್ಮಾ

ಪ್ರೊ. ಎಸ್. ಜಿ. ಇಟಗಿ

ಕರ್ನಾಟಕ ವಿಶ್ವವಿದ್ಯಾಲಯ

ಧಾರವಾಡ

ನವಂಬರ, ೧೯೭೬

ಪ್ರಕಾಶಕರು :
**ಸಿ. ಎಸ್. ಕಣವಿ**
ನಿರ್ದೇಶಕರು
ವ್ಯಾಸಂಗವಿಸ್ತರಣ-ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ೫೦೦೦ ಪ್ರತಿಗಳು
ನವಂಬರ, ೧೯೭೬



ಬೆಲೆ : **೨೫ ಪೈಸೆ**

ಮುದ್ರಕರು :
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ
ಧಾರವಾಡ-೫೮೦೦೦೩

# ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ವ್ಯಾಸಂಗ ವಿಸ್ತರಣ ಹಾಗೂ ಪ್ರಕಟನ ಶಾಖೆಯ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನ ಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವ ವಿದ್ಯಾಲಯದ ಆಡಳಿತಕ್ಷೇತ್ರದಲ್ಲಿರುವ ಎಂಟು ಜಿಲ್ಲೆಗಳ ಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕ ಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನ ಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನ ಭಾಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸ ಮಾಲೆಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವುದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವುದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರೆವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೨೪೭ ಪುಸ್ತಕಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ನಾಲ್ಕು-ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಆರ್. ಸಿ. ಹಿರೇಮಠ
ಕುಲಪತಿಗಳು

# ಅರಿಕೆ

ಉತ್ತರ ಕನ್ನಡ ಜಿಲ್ಲೆಯ ಸಿದ್ಧಾಪೂರ ತಾಲೂಕಿನ ಇಟಗಿ ಗ್ರಾಮದ ಆರ್. ವ್ಹಿ. ಹೈಸ್ಕೂಲಿನ ಆಶ್ರಯದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ "ವ್ಯಾಸಂಗವಿಸ್ತರಣ ಶಾಖೆ" ಯ ೨೧೪ ನೆಯ ಉಪನ್ಯಾಸ ಶಿಬಿರವನ್ನು ಜನೇವರಿ ೯, ೧೯೭೬ ರಂದು ಏರ್ಪಡಿಸಲಾಗಿತ್ತು. ಆ ಶುಭ ಪ್ರಸಂಗದಲ್ಲಿ "ಕವಯಿತ್ರಿ ಮಹಾದೇವಿ ವರ್ಮಾ" ಎಂಬ ಹಿಂದೀ ಸಾಹಿತ್ಯದ ಜನಪ್ರಿಯ ಹಾಗೂ ಪ್ರತಿಷ್ಟಿತ ವಿದುಷಿಯ ವಿಷಯವಾಗಿ ನನಗೆ ಮಾತನಾಡುವ ಸದವಕಾಶ ದೊರೆತಿತ್ತು. ಅದನ್ನೇ ವಿಸ್ತರಿಸಿ ಕೆಲವೊಂದು ವ್ಯತ್ಯಾಸದೊಡನೆ ಪ್ರಬಂಧ ರೂಪಕ್ಕೆ ತಿರುಗಿಸಿ ಈ ಪುಸ್ತಿಕೆಯನ್ನು ಸಿದ್ಧಗೊಳಿಸಿದ್ದೇನೆ.

ಸಂಕ್ಷಿಪ್ತ ಜೀವನ, ಛಾಯಾವಾದ, ಮಹಾದೇವಿಯವರ ದುಃಖವಾದ ಹಾಗೂ ದರ್ಶನ, ಮಹಾದೇವಿಯವರ ಕೃತಿಗಳು, ಮಹಾದೇವಿ ವರ್ಮಾ ಅವರ ಕಾವ್ಯಸ್ವರೂಪ ಹಾಗೂ ವೈಶಿಷ್ಟ್ಯ, ಮಹಾದೇವಿ ಮತ್ತು ಮೀರಾ— ಎಂದು ಪ್ರಕರಣಗಳನ್ನು ರಚಿಸಿಕೊಂಡು ಒಟ್ಟಿನಲ್ಲಿ ಏಕರೂಪತೆಯನ್ನು ಸಾಧಿಸಲು ಪ್ರಯತ್ನಿಸಿದ್ದೇನೆ. ವಿಷಯವ್ಯಾಪ್ತಿ ಹಿರಿದಾದ್ದರಿಂದಲೂ, ಕೃತಿ ಕಿರಿದಾದ್ದರಿಂದಲೂ ಬಹಳ ವಿಷಯ ಕೈಬಿಟ್ಟು ಹೋಗಿ ಸಂಕ್ಷಿಪ್ತ ಸ್ವರೂಪದರ್ಶನ ಮಾತ್ರ ಸಾಧ್ಯ

ವಾಗಿದೆ. "ವಿಸ್ತೃತ ಹಾಗೂ ವ್ಯಾಪಕವಾದ ಗಂಗಾಪ್ರವಾಹ ವನ್ನು ಒಂದು ಚಿಕ್ಕ ಪಾತ್ರೆಯಲ್ಲಿ ಹೇಗೆ ತಾನೆ ತುಂಬಲು ಸಾಧ್ಯ ? ಆ ಚಿಕ್ಕ ಪಾತ್ರೆಯಲ್ಲಿ ತುಂಬಿದ ಜಲದಷ್ಟರಿಂದಲೇ ಸಂತುಷ್ಟರಾಗಬೇಕಲ್ಲವೇ ?

ಶ್ರೀಮತಿ ಮಹಾದೇವಿ ವರ್ಮಾ ಅವರ ಅನುಭಾವಪರ ಹಿಂದೀ ಮೂಲದ ಗೀತಗಳ ಸಾರವನ್ನು ಕನ್ನಡ ಓದುಗರ ಸೌಲಭ್ಯಕ್ಕಾಗಿ ಕನ್ನಡದಲ್ಲಿಯೇ ಈ ಪುಸ್ತಿಕೆಯಲ್ಲಿ ಸಂಗ್ರ ಹಿಸಲಾಗಿದೆ ಎಂಬುದನ್ನು ಸಹೃದಯ ಓದುಗರು ಗಮನಿಸ ಬೇಕು.

ಈ ಪ್ರಬಂಧವನ್ನು ತಯಾರಿಸಲು ಕೆಲವು ಪ್ರಸಿದ್ಧ ಸಾಹಿತಿಗಳ ಗ್ರಂಥಗಳಿಂದ ಹಲವಾರು ವಿಚಾರಗಳನ್ನು ಎತ್ತಿ ಕೊಂಡಿದ್ದಕ್ಕಾಗಿ ಅವರೆಲ್ಲರಿಗೂ ನನ್ನ ಹಾರ್ದಿಕ ಕೃತಜ್ಞತೆ ಗಳು ಮೀಸಲಾಗಿವೆ.

ಅಂದು ನನ್ನ ಉಪನ್ಯಾಸವನ್ನು ಆತ್ಮಸಂತೋಷ ದಿಂದ, ಅತ್ಯಂತ ಗೌರವದಿಂದ ಕೇಳಿ ನನ್ನನ್ನು ಗೌರವಿಸಿ ಪ್ರೋತ್ಸಾಹಿಸಿದ್ದಕ್ಕಾಗಿ ಇಟಗಿ ಗ್ರಾಮದ ಯಾವತ್ತೂ ಸುಜನ ರಸಿಕವೃಂದಕ್ಕೆ ನಾನು ಪ್ರೀತಿ ವಿಶ್ವಾಸಗಳಿಂದ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಇದೇ ಪ್ರಕಾರ ಇಟಗಿಯ ಆರ್. ವ್ಹಿ. ಹೈಸ್ಕೂಲಿನ ವ್ಯವಸ್ಥಾಪಕ ಮಂಡಲಿಗೂ, ಪ್ರಧಾನ ಅಧ್ಯಾಪಕ ಶ್ರೀ ಬಿ. ಬಿ.

ನಾಯಿಕ ಹಾಗೂ ಅವರ ಅಧ್ಯಾಪಕ ವೃಂದಕ್ಕೂ ಅವರು ತೋರಿದ ಸಹಕಾರ ಹಾಗೂ ಪ್ರೀತ್ಯಾದರಗಳಿಗಾಗಿ ನಾನು ಅವರೆಲ್ಲರಿಗೂ ಅತ್ಯಂತ ಆಭಾರಿಯಾಗಿದ್ದೇನೆ.

ಈ ಹಸ್ತಪ್ರತಿಯನ್ನು ತಯಾರಿಸುವ ಗುರುತರ ಕಾರ್ಯದಲ್ಲಿ ತಮ್ಮ ಸಲಹೆ ಸೂಚನೆಗಳನ್ನಿತ್ತು ಮಾರ್ಗದರ್ಶನ ಮಾಡಿದ ನಮ್ಮ ಕಾಲೇಜಿನ ಕನ್ನಡ ವಿಭಾಗದ ಅಧ್ಯಕ್ಷರಾದ ಡಾ. ಎಲ್. ಆರ್. ಹೆಗಡೆ, M.A., Phd. ಮತ್ತು ಹಸ್ತ ಪ್ರತಿಯನ್ನು ಓದಿ, ಲೋಪದೋಷಗಳನ್ನು ತಿದ್ದಿ ಈ ಪ್ರಬಂಧವು ಪುಸ್ತಿಕೆಯ ರೂಪದಲ್ಲಿ ಬರುವಂತೆ ಸಹಕರಿಸಿ, ಸಹಾಯ ಮಾಡಿದ್ದಕ್ಕಾಗಿ ನನ್ನ ಆತ್ಮೀಯ ಸನ್ಮಿತ್ರರಾದ ಪ್ರಾಧ್ಯಾಪಕ ಎಲ್. ವ್ಹಿ. ಪೈ ಈ ಇಬ್ಬರೂ ಮಹನೀಯರಿಗೆ ನಾನು ತುಂಬಾ ಚಿರಋಣಿಯಾಗಿದ್ದೇನೆ.

ಉಪನ್ಯಾಸ ಶಿಬಿರದಲ್ಲಿ ಪರಸ್ಥಳದಲ್ಲಿ ನಮಗೆ ಯಾವದೇ ತೊಂದರೆ ಆಗದಂತೆ ವಾತ್ಸಲ್ಯ ಪ್ರೇಮದಿಂದ, ಪ್ರೀತ್ಯಾದರಗಳಿಂದ ನಮ್ಮ ಯಾವತ್ತೂ ಯೋಗಕ್ಷೇಮ ವನ್ನು ನೋಡಿಕೊಂಡಂಥ ವ್ಯಾಸಂಗವಿಸ್ತರಣ ಶಾಖೆಯ ಸಹಾಯಕ ನಿರ್ದೇಶಕರಾದ ಶ್ರೀಯುತ ಎಲ್. ಎಮ್. ಗುಡ್ಡೀನವರಿಗೆ ನನ್ನ ಹೃತ್ಪೂರ್ವಕ ವಂದನೆಗಳು.

ಹೃದಯವನ್ನು ಕೊರೆಯುವಂಥ ಆ ಚಳಿಯಿಂದ ತುಂಬಿದ ರಾತ್ರಿಯಲ್ಲಿ ಡಳಿಯಿಂದ ಅತ್ಯಂತ ಪೀಡಿತರಾದ

ನಮ್ಮನ್ನೆಲ್ಲಾ ತಮ್ಮ ಅಪೂರ್ವ ಹಾಸ್ಯ ಚಟಾಕಿಯನ್ನು ಹಾರಿಸುತ್ತಾ ನಗೆಗಡಲಿನಲ್ಲಿ ತೇಲಿಸಿ ಭಯಂಕರವಾದ ಆ ಚಳಿಯ ಬಾಧೆಯನ್ನು ಮರೆಯುವಂತೆ ಮಾಡಿದ ಹಾಗೂ ನನ್ನ ಉಪನ್ಯಾಸದ ವಿಷಯವಾಗಿ ಕೆಲವು ಸಮಯೋಚಿತ ಸಲಹೆಗಳನ್ನು ನೀಡಿ ಸಹಕರಿಸಿದ್ದಕ್ಕಾಗಿ ನಾನು ಕ. ವಿ. ವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾದ ಶ್ರೀಯುತ ಬಿ. ಸಿ. ಜವಳಿಯವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸದೇ ಇರಲಾರೆ.

ಅಂದು ನನ್ನ ಉಪನ್ಯಾಸಕ್ಕೆ ಏರ್ಪಾಟು ಮಾಡಿ, ಇಂದು ನನ್ನ ಈ ಚಿಕ್ಕ ಪುಸ್ತಕವನ್ನು ಪ್ರಕಟಿಸಿ ನನಗೆ, ನನ್ನ ವಿಚಾರಗಳಿಗೆ ಗೌರವ ತೋರಿಸಿದ್ದಕ್ಕಾಗಿ ನಾನು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಹಾಗೂ ಸಂಬಂಧಿಸಿದ ಎಲ್ಲ ಅಧಿಕಾರ ವರ್ಗಕ್ಕೂ ಅತ್ಯಂತ ಚಿರಋಣಿಯಾಗಿದ್ದೇನೆ. ತಮ್ಮ ಸೂಕ್ತ ಸಲಹೆಯನ್ನಿತ್ತು ಈ ಕೃತಿಯು ಪುಸ್ತಕ ರೂಪತಾಳಲು ಕಾರಣರಾದ ಮಾನ್ಯ ತಜ್ಞರಿಗೆ ಅನಂತ ವಂದನೆಗಳು.

ಎ. ವ್ಹಿ. ಬಾಳಿಗಾ, ಕಲಾ ಹಾಗೂ
ವಿಜ್ಞಾನ ಮಹಾವಿದ್ಯಾಲಯ
ಕುಮಟಾ
೨೪-೨-೧೯೭೬

ಎಸ್. ಜಿ. ಇಟಗಿ

# ಪರಿವಿಡಿ

# ೧. ಸಂಕ್ಷಿಪ್ತ ಜೀವನ

ಆಧುನಿಕ ಕಾವ್ಯದ ಪ್ರಾತಿನಿಧಿಕ ಕವಯಿತ್ರಿ ಶ್ರೀಮತಿ ಮಹಾದೇವಿ ವರ್ಮಾರವರ ಜನ್ಮವು ಸಂವತ್ ೧೯೬೪ ರಲ್ಲಿ ಉತ್ತರ ಪ್ರದೇಶದ ಫರೂಕಾಬಾರ ನಗರದಲ್ಲಿ ಸುಶಿಕ್ಷಿತ, ಸುಸಂಸ್ಕೃತ, ಸುಸಂಪನ್ನ ಹಾಗೂ ಸಮೃದ್ಧ ಪರಿವಾರದಲ್ಲಿ ಆಯಿತು. ತಂದೆ ಗೋವಿಂದ ಪ್ರಸಾದ ವರ್ಮಾ, ತಾಯಿಯ ಹೆಸರು ಹೇಮರಾನಿದೇವಿ. ವರ್ಮಾ ಪರಿವಾರದಲ್ಲಿ ಏಕ ಮೇವ ದ್ವಿತೀಯ ಕನ್ಯಾರತ್ನವಾಗಿದ್ದರಿಂದ ಮಹಾದೇವಿ ಯವರ ಬಾಲ್ಯವು ಅತ್ಯಂತ ಸುಖಮಯವಾಗಿತ್ತು. ಬಾಲ್ಯ ದಿಂದಲೂ ಅವರಿಗೆ ಯಾವದೇ ತರಹದ ದುಃಖ ಅಥವಾ ಅಭಾವದ ಪರಿಚಯವೆಂದೂ ಆಗಲಿಲ್ಲ. ಅತಿ ಚಿಕ್ಕ ವಯಸ್ಸಿ ನಲ್ಲಿಯೇ ಮಹಾದೇವಿಯವರ ವಿವಾಹವು ಶ್ರೀರೂಪನಾರಾಯಣ ರೊಡನೆ ಆಯಿತು. ವಿವಾಹದ ನಂತರ ತಂದೆಯ ಮನೆ ಯಲ್ಲಿಯೇ ಉಳಿದು ತಮ್ಮ ವಿದ್ಯಾಭ್ಯಾಸವನ್ನು ಪ್ರಾರಂಭಿಸಿ ದರು. ಬಾಲ್ಯದಿಂದಲೂ ಪ್ರತಿಭಾವಂತರಾದ ಮಹಾದೇವಿ ವರ್ಮಾ ಅವರು ಪ್ರತಿಯೊಂದು ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿಯೇ ಉತ್ತೀರ್ಣರಾಗುತ್ತಾ ಎಂ.ಎ. ಪದವಿಯನ್ನು ಸಹ ಪಡೆದರು.

ಕಾವ್ಯಸೃಜನದಲ್ಲಿ ಅವರಿಗೆ ವಿದ್ಯಾರ್ಥಿ ಜೀವನದಿಂದಲೇ ಒಲವು. ಸ್ನಾತಕೋತ್ತರ ಪದವಿ ಪಡೆಯುವ ಮೊದಲೇ ಮಹಾದೇವಿ ವರ್ಮಾ ಅವರ 'ನೀಹಾರ' ಮತ್ತು 'ರಶ್ಮಿ' ಎಂಬ ಎರಡು ಕವನ ಸಂಕಲನಗಳು ಪ್ರಕಟವಾದವು. ನಂತರ 'ಪ್ರಯಾಗ ಮಹಿಳಾ ವಿದ್ಯಾಪೀಠ'ದಲ್ಲಿ ಅಧ್ಯಾಪನ ವೃತ್ತಿಯನ್ನು ಕೈಕೊಂಡರು. ಈ ಪ್ರಕಾರ ತಮ್ಮ ಅಮೋಘ ಸೇವೆಯನ್ನು ಸಲ್ಲಿಸುತ್ತಾ 'ಪ್ರಯಾಗ ಮಹಿಳಾ ವಿದ್ಯಾಪೀಠ'ದ ಕುಲಪತಿಯ ಸ್ಥಾನವನ್ನು ಅಲಂಕರಿಸಿ ಅದರ ಉತ್ತರೋತ್ತರ ವೃದ್ಧಿಗೆ ಕಾರಣರಾಗಿದ್ದಾರೆ.

ಕಾವ್ಯ ರಚನೆಯಲ್ಲದೇ ಹಿಂದೀ ಸಾಹಿತ್ಯಕ್ಕೆ ವಿವಿಧ ರೀತಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಸುಮಾರು ೧೯೫೨ರಲ್ಲಿ "ಸಾಹಿತ್ಯಕಾರ ಸಂಸದ್"-ಎಂಬ ಸಂಸ್ಥೆಯನ್ನು ಪ್ರಯಾಗ ದಲ್ಲಿ ಸ್ಥಾಪಿಸಿ ಹಿಂದೀ ಲೇಖಕರಿಗೆ ಪ್ರಕಾಶಕರಿಂದುಂಟಾಗು ತ್ತಿದ್ದ ಅನ್ಯಾಯವನ್ನು ತೊಡೆದು ಹಾಕಲು ಈ ಸಂಸ್ಥೆಯ ಮುಖಾಂತರ ಅರ್ಹರಾದ ಲೇಖಕರ ಕೃತಿಗಳ ಪ್ರಕಾಶನ ಕಾರ್ಯವನ್ನು ಪ್ರಾರಂಭಿಸಿದರು. ಇದುವರೆಗೆ ಈ ಸಂಸ್ಥೆಯು ಅನೇಕ ವಿದ್ವನ್ಮಣಿಗಳ ಅಮೂಲ್ಯ ಕೃತಿಗಳನ್ನು ಪ್ರಕಟಿಸಿದೆ.

ಮಹಾದೇವಿಯವರ ಜೀವನದ ವೈಶಿಷ್ಟ್ಯಗಳಲ್ಲಿ ಅವರ ನಗೆಯೂ ಒಂದು. ಅವರ 'ನಗೆ'ಯು ಅನೇಕ ಅಸಂಖ್ಯ ಸಾಹಿತಿಗಳನ್ನು, ಸಾಹಿತ್ಯ ಪ್ರೇಮಿಗಳನ್ನು ಪ್ರಭಾವಿತಗೊಳಿಸಿ ದ್ದುಂಟು. ಅದು ನಿಜವಾಗಿಯೂ ವೈಶಿಷ್ಟ್ಯಪೂರ್ಣವೂ,

ಆಹ್ಲಾದದಾಯಕವೂ ಆಗಿದೆ. ಅವರ 'ನಗೆ'ಯು ನಿಜಕ್ಕೂ ಅಲೌಕಿಕವಾಗಿದೆ ಎನ್ನಲು ಅಡ್ಡಿ ಇಲ್ಲ.

ಮಹಾದೇವಿಯವರ 'ನಗೆ'ಯನ್ನು ಕಂಡು ಪ್ರಭಾವಿತರಾದ ಒಬ್ಬ ಪ್ರಸಿದ್ಧ ಸಾಹಿತಿಗಳಾದ ಶಿವಚಂದ್ರ ನಾಗರ ಎಂಬವರು ಹೀಗೆ ಉದ್ಗಾರ ತೆಗೆದದ್ದುಂಟು—"ಸ್ತ್ರೀಯರ ಮುಕ್ತ ಹಾಸವು ನನಗೆ ಸೇರುವುದಿಲ್ಲ ಆದರೆ ಇಂಥ ವಾತ್ಸಲ್ಯಪೂರ್ಣವಾದ ನಗೆ ನನಗೆಂದೂ ಜೀವನದಲ್ಲಿ ಸಿಗಲಿಲ್ಲ. ನಿಜವಾಗಿಯೂ ಮಹಾದೇವಿಯವರ ನಗೆಯು ಅದು ತುಟಿಯಿಂದ ಹೊರಬಿದ್ದಿರಲಿ ಅಥವಾ ಹೃದಯದ ಆಳದಿಂದ ಹೊರಸೂಸಿರಲಿ ಅದು ನಿರ್ಮಲವಾಗಿಯೂ, ಅಕೃತ್ರಿಮ ಹಾಗೂ ನಿಶ್ಚಲವಾಗಿರುತ್ತದೆ."

ಮಹಾದೇವಿಯವರ ಮತ್ತೊಂದು ವೈಶಿಷ್ಟ್ಯವೆಂದರೆ ಅವರ "ವಿಶಾಲ ಪರಿವಾರ." ಅವರು ಗಾರ್ಹಸ್ಥ್ಯ ಜೀವನವನ್ನು ಸ್ವೀಕರಿಸದಿದ್ದರೂ ಅವರ ಪರಿವಾರವು ಬಹಳೇ ವಿಶಾಲವಾಗಿಯೂ, ವಿಸ್ತೃತವಾಗಿಯೂ ಹಾಗೂ ಅದರಲ್ಲಿ ಎಲ್ಲ ಜಾತಿ-ಮತ-ಪಂಥದ ಎಲ್ಲ ವಯಸ್ಸಿನ ಸ್ತ್ರೀ-ಪುರುಷರಲ್ಲದೇ ಹೂ, ವೃಕ್ಷಗಳೂ ಹಾಗೂ ಪಕ್ಷಿ ಪ್ರಾಣಿಗಳೂ ಸಹ ಆಶ್ರಯವನ್ನು ಪಡೆದಿರುತ್ತವೆ. ಮಹಾದೇವಿಯವರ ಸಹಾನುಭೂತಿಯು ವಿಶ್ವವ್ಯಾಪಿಯಾಗಿದೆ. ಅವರಲ್ಲಿ ಜೀವದಯೆ, ಭೂತದಯೆ ಎಷ್ಟರ ಮಟ್ಟಿಗೆಯಿದೆಯೆಂದರೆ ಒಂದು ಸ್ಥಾನದಿಂದ ಗಿಡವನ್ನು ಅದು ಒಣಗಿ ಹೋದೀತೆಂಬ ಭಯದಿಂದ ಕಿತ್ತುಹಾಕಲಾರರು, ಹೂವು ಬಾಡಿ ಹೋದೀತೆಂದು ಅದನ್ನು

ಹರಿಯುವದಿಲ್ಲ, ಯಾವದೇ ಜೀವವು ಎಷ್ಟೇ ಚಿಕ್ಕದಾಗಿದ್ದರೂ ಅದರ ಮೃತ್ಯು ಅಥವಾ ಸಾವನ್ನು ತಮ್ಮ ಕಣ್ಣಿನಿಂದ ನೋಡಲಾರರು. ಇಂಥ ಒಂದು ಅದ್ಭುತ ಘಟನೆಯನ್ನು ಅವರ 'ಸಾಧನಾ ಕುಟೀರ'ಕ್ಕೆ ಹೋದಾಗ್ಗೆ ಕಣ್ಣಾರೆ ಕಂಡು ಪ್ರಭಾವಿತರಾದ ಪ್ರತ್ಯಕ್ಷದರ್ಶಿಗಳಾದ ಶ್ರೀ ಶಿವಚಂದ್ರ ನಾಗ ರರು ಆ ಘಟನೆಯ ಸ್ಪಷ್ಟ ಚಿತ್ರವನ್ನು ಹೀಗೆ ಚಿತ್ರಿಸಿದ್ದಾರೆ —ಶಿವಚಂದ್ರ ನಾಗರರು ತಮ್ಮ ಮಿತ್ರನೊಂದಿಗೆ ಮಹಾ ದೇವಿಯ ನಿವಾಸಕ್ಕೆ ತೆರಳಿದಾಗ ಅವರು ಕುಳಿತಂಥ ರತ್ನ ಗಂಬಳಿಯ ಮೇಲೆ ಒಂದು ಇರಿವೆಯು ಬರುತ್ತಿರುವದನ್ನು ಕಂಡು ಅವರ ಮಿತ್ರನು ತನ್ನ ಕೈಬೆರಳುಗಳಿಂದ ಆ ಇರಿವೆ ಯನ್ನು ದೂಡಿದ್ದನ್ನು ಕಂಡು ದಯಾಮಯಿ, ವಾತ್ಸಲ್ಯ ಮಯಿ ಮಹಾದೇವಿಯವರು ಅದು ಎಲ್ಲಿ ಸತ್ತು ಹೋಗು ವದೋ ಎಂದು ಬಹಳೇ ಗಾಬರಿಯಾಗಿದ್ದರು. ಮತ್ತೊಂದು ಸಲ, ಅವರ ಅತ್ಯಂತ ಪ್ರಿಯವಾದ "ಸುನಯನಾ" ಎಂಬ ಬೆಕ್ಕು ಮಹಾದೇವಿಯವರ ಕಣ್ಮುಂದೆಯೇ ಒಂದು ಜೀವ ವನ್ನು ಹಿಡಿದು ಕೊಂದು ಹಾಕಿದಕೂಡಲೇ ಅತ್ಯಂತ ದುಃಖ ದಿಂದ ಮಹಾದೇವಿಯವರ ಕಣ್ಣುಗಳಿಂದ ಅಶ್ರುಧಾರೆ ಒಂದೇ ಸವನೇ ಹರಿಯಹತ್ತಿತು. ಮತ್ತು ಅದರಿಂದ ಬಹಳೇ ದುಃಖತಪ್ತರಾದ ಮಹಾದೇವಿಯವರು "ಇನ್ನು ಈ ಬೆಕ್ಕನ್ನು ನನ್ನ ಬಳಿ ಇಟ್ಟುಕೊಳ್ಳಲಾರೆನು" ಎಂದು ಹೇಳಿ ದರು. ಆ ಘಟನೆಯ ನಂತರ ಶಿವಚಂದ್ರ ನಾಗರರು ಶ್ರೀಮತಿ ಮಹಾದೇವಿಯವರನ್ನು ಭೆಟ್ಟಿಯಾಗಲು ಅವರ

ನಿವಾಸಕ್ಕೆ ಅನೇಕ ಬಾರಿ ಹೋದರೂ ಅವರಿಗೆ 'ಸುನಯನಾ' (ಬೆಕ್ಕು) ಮಾತ್ರ ಎಂದೂ ಕಣ್ಣಿಗೆ ಬೀಳಲಿಲ್ಲ."

ಮಹಾದೇವಿಯವರ ಬಹುಮುಖ ವ್ಯಕ್ತಿತ್ವದಲ್ಲಿ "ರಾಷ್ಟ್ರಸೇವಿಕೆ"ಯ ವ್ಯಕ್ತಿತ್ವವು ಅತ್ಯಂತ ಮಹತ್ವ ಪೂರ್ಣವಾಗಿದೆ. ಎಂದಾದರೂ ರಾಷ್ಟ್ರದಲ್ಲಿ ದೇಶವ್ಯಾಪೀ ಯಾವದೇ ಆಂದೋಲನ ಅಥವಾ ಕ್ರಾಂತಿ ಪ್ರಾರಂಭವಾದಾಗ್ಗೆ ಅಥವಾ ದೇಶವಾಸಿಗಳ ಮೇಲೆ ಯಾವದೇ ಸಂಕಟ ಬಂದಾಗ್ಗೆ ಮಹಾದೇವಿಯವರು ಪತ್ರಿಕೆಗಳಲ್ಲಿ ತಮ್ಮ ಕವಿತೆಗಳನ್ನು ಹಾಗು ಲೇಖನಗಳನ್ನು ಮಾತ್ರ ಬರೆದು ಒಣ ಸಹಾನುಭೂತಿ ತೋರಿಸದೇ ತನು-ಮನ-ಧನದಿಂದ ಸಹಾಯವನ್ನು ಸಲ್ಲಿಸಿದ್ದಾರೆ.

ಮಹಾದೇವಿಯವರು ಎಷ್ಟೇ ದುಃಖವನ್ನು, ಕಷ್ಟವನ್ನು ಸಹಿಸಬಲ್ಲರು ಆದರೆ, ಪರರ ದುಃಖ ಅಥವಾ ಪೀಡೆಯನ್ನು ಮಾತ್ರ ಕಣ್ಣುಗಳಿಂದ ನೋಡಲು ಸಾಧ್ಯವಿಲ್ಲ. ತಾವು ಯಾವಾಗಲೂ "ನೀರು ತುಂಬಿದ ಮೋಡ" (ನೀರ ಭರೀ ಬದಲೀ) ದಂತಿರಬೇಕೆಂದು ಬಯಸುತ್ತಾರೆ. ಒಂದು ಸಲ ಶಿವಚಂದ್ರ ನಾಗರರು ಪಾತ್ರ-ಅಪಾತ್ರವನ್ನು ತಿಳಿದು ದಯೆ ತೋರಿಸಬೇಕೇ ವಿನಹ ಪ್ರತಿಯೊಬ್ಬರ ಮೇಲೆ ದಯೆ ತೋರಿಸಲಿಕ್ಕಾಗುವದಿಲ್ಲ ಎಂದು ಹೇಳಿದರು ಅದಕ್ಕೆ ಉತ್ತರರೂಪವಾಗಿ ಶ್ರೀಮತಿ ಮಹಾದೇವಿಯವರು ಹೀಗೆ ಹೇಳಿದರು— "ಮೋಡವು ಎಂದೂ ಸ್ಥಾನವನ್ನು ನೋಡಿ ನೀರನ್ನು ಸುರಿಸುವದಿಲ್ಲ"— ಅಂದರೆ ಎಲ್ಲೆಡೆಗೂ ನಿಸ್ಪೃಹ

ಹಾಗೂ ನಿಷ್ಪಕ್ಷ ಭಾವದಿಂದ ನೀರನ್ನು ಸುರಿಸುತ್ತದೆ. ಈ ಉಕ್ತಿಯಲ್ಲಿಯೇ ಮಹಾದೇವಿಯವರ ಉಚ್ಚಾದರ್ಶವು ನಿಹಿತ ವಾಗಿದೆ. ಸನ್ ೧೯೪೨ ರಲ್ಲಿ ಬಂಗಾಲದಲ್ಲಿ ಬರಗಾಲ ಬಿದ್ದಾಗ್ಗೆ ಅವರು ಬರಗಾಲ ಪೀಡಿತ ಜನರಿಗೋಸ್ಕರ ಬಟ್ಟೆ, ಆಹಾರ ಮತ್ತು ಔಷಧಗಳನ್ನು ಸಂಗ್ರಹಿಸಿ ತಮ್ಮ ಅಮೂಲ್ಯ ಸೇವೆಯನ್ನು ಸಲ್ಲಿಸಿ ತಮ್ಮ ಹೃದಯದಲ್ಲಿದ್ದ ಅಪಾರ 'ಮಾನವ ಪ್ರೇಮ'ವನ್ನು ಹಾಗು ಹೃದಯ ವೈಶಾಲ್ಯತೆಯ ಪರಿಚಯವನ್ನು ತೋರಿಸಿಕೊಟ್ಟರು. ಇಷ್ಟೇಅಲ್ಲದೆ "ವಂಗ-ದರ್ಶನ" ಎಂಬ ಪುಸ್ತಕವನ್ನು ಪ್ರಕಟಿಸಿ ಅದರಿಂದ ಬಂದ ಎಲ್ಲ ಹಣವನ್ನು "ಅಕಾಲಪೀಡಿತ ಸಹಾಯತಾಕೋಶ"ಕ್ಕೆ ಅರ್ಪಿಸಿದರು.

"ನೋಆಖಲೀ ಪೀಡಿತ ಸಂತ್ರಸ್ತರಿಗೂ ಸಹ ಹಿಂದೀ ಲೇಖಕರಿಂದ ಹಣ ಸಂಗ್ರಹಿಸಿ ಹಿಂದೀ ಲೇಖಕರ ಸಹಾನು ಭೂತಿಯ ರೂಪದಲ್ಲಿ 'ಲೇಖಕರನಿಧಿ'ಯ ಹೆಸರಿನಿಂದ ಆರ್ಥಿಕ ಸಹಾಯವನ್ನು ಒದಗಿಸಿದ್ದುಂಟು. ಇಂದು ಸಹ ಪಂಜಾಬದ ಶರಣಾರ್ಥಿ ನಿಧಿಗೆ" ತಮ್ಮ ಯಥಾಶಕ್ತಿ ಆರ್ಥಿಕ ಸಹಾಯವನ್ನು ಸಲ್ಲಿಸುತ್ತಿದ್ದಾರೆ.

ಅವರ ಜೀವನದ ಇನ್ನೊಂದು ಅದ್ಭುತವಾದ ವೈಶಿಷ್ಟ್ಯವೇನೆಂದರೆ "ದರ್ಪಣವಿಮುಖತೆ"– ಅಂದರೆ, ಮಹಾತ್ಮಾ ಗಾಂಧಿಯವರಂತೆ ಮಹಾದೇವಿಯವರೂ ಸಹ

ಎಂದೂ ಕನ್ನಡಿಯನ್ನು ಉಪಯೋಗಿಸುವದಿಲ್ಲ. ಅಂದರೆ ಅತ್ಯಂತ ಸರಳ ಹಾಗೂ ನಿರಾಡಂಬರ ಜೀವನ ಮಹಾದೇವಿಯವರದು. "ಸಾದಾ ಜೀವನ ಹಾಗೂ ಉಚ್ಚವಿಚಾರ"- ಎಂಬ ಮಹಾತ್ಮಾ ಗಾಂಧೀಜೀಯವರ ಉಚ್ಚದರ್ಶವು ಮಹಾದೇವಿಯವರ ಜೀವನದಲ್ಲಿ ಸಂಪೂರ್ಣವಾಗಿ ಚರಿತಾರ್ಥವಾಗಿದೆ.

ಮಹಾದೇವಿಯವರು ಕಟ್ಟಿಗೆಯ ಒಂದು ಬಿರುಸು ಹಲಿಗೆಯ ಮೇಲೆ ಮಲಗುತ್ತಾರೆ. ನಿದ್ರಿಸುವದೂ ಬಹು ಕಡಿಮೆ. ಇವರ ಸಾಹಿತ್ಯ ಸೃಜನವು ಹೆಚ್ಚಾಗಿ ರಾತ್ರಿಯ ದ್ವಿತೀಯ ಪ್ರಹರದಲ್ಲಿಯೇ ಆಗಿದೆ. ಒಟ್ಟಿನ ಮೇಲೆ ಎಲ್ಲ ರೀತಿಯಿಂದಲೂ ಈ ಸಾಹಿತ್ಯಸಾಧಕರಾದ ಮಹಾದೇವಿ ನಿಜವಾಗಿಯೂ ತಪಸ್ವಿನಿಯೇ ಆಗಿದ್ದಾರೆ. ಎಲ್ಲ ರೀತಿಯಿಂದಲೂ ಮಹಾದೇವಿಯವರು ಮಹಾನ್‌ರಾಗಿದ್ದಾರೆ- "ಹಿಮಾಲಯದಂತೆ ಮಹಾನ್-ಹಿಮವತ್" ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ವಿಶ್ವವನ್ನೆಲ್ಲ ಬೆರಗುಗೊಳಿಸಿದ 'ಭಗವದ್ಗೀತೆ'ಯ ವಿಷಯವಾಗಿ ಮಹಾದೇವಿಯವರ ಸ್ಪಷ್ಟ ಅಭಿಪ್ರಾಯ ಹೀಗಿದೆ- ನನಗೆ ಅತ್ಯಂತ ಪ್ರಿಯವಾದ ಗ್ರಂಥವೆಂದರೆ "ಋಗ್ವೇದ". 'ಋಗ್ವೇದ'ದ ಕೆಲವು ಗೀತಗಳ ಕಾವ್ಯಾನುವಾದವನ್ನೂ ಸಹ ಮಾಡಿದ್ದೇನೆ. ನನಗೆ ಅತ್ಯಂತ ಪ್ರಿಯವಾದ ಮತ್ತೊಂದು ಗ್ರಂಥವೆಂದರೆ "ಉಪನಿಷದ್".

‘ಗೀತಾ’ ಮಾತ್ರ ನನಗೆ ಅಷ್ಟೊಂದು ಪ್ರಿಯವಿಲ್ಲ. ಕಾರಣ ವೇನೆಂದರೆ ಕೃಷ್ಣನು ಯಾವ ಕ್ರಾಂತಿಯ ಸೂತ್ರಧಾರ ನಿದ್ದನೋ ಅದರಲ್ಲಿಯೇ ಸ್ವತಃ ಆ ಕ್ರಾಂತಿಯು ಕರಗಿ ಹೋಗಿದೆ. ಕೃಷ್ಣನು ಹಿಂಸೆ ಮಾಡಲು ಆದೇಶವಿತ್ತನು ಗೀತೆಯಲ್ಲಿ. ಆದರೆ, ನನಗಂತೂ ಭಗವಾನ್ ಬುದ್ಧನ ಅಹಿಂಸೆಯು ಪಂಚಪ್ರಾಣವಾಗಿದೆ. ಅಂದಮೇಲೆ ಅದು (‘ಗೀತಾ’) ನನಗೆ ಹೇಗೆ ಪ್ರಿಯವಾಗಬಲ್ಲದು?”

ಸಂಸ್ಕೃತ ಕವಿಗಳಲ್ಲಿ ಕಾಳಿದಾಸನ ‘ರಘುವಂಶ’ವು ಮಹಾದೇವಿಯವರಿಗೆ ಇಷ್ಟವಾಗಿದೆ. ಅವರು ಅದರ ಅನು ವಾದ ಸಹ ಮಾಡಿದ್ದಾರೆ. ಭವಭೂತಿಯ “ಉತ್ತರರಾಮ ಚರಿತ”ವಂತೂ ನನಗೆ ಅತ್ಯಂತ ಪ್ರಿಯವಾಗಿದೆ ಎಂದು ಅವರು ಹೇಳುತ್ತಾರೆ. ಇದಲ್ಲದೇ ಅವರು ವರ್ಣಾಶ್ರಮ ಪದ್ಧತಿಯ ಸಮರ್ಥಕರಾದ “ವರಕವಿ ತುಳಸೀದಾಸರಿ ಗಿಂತಲೂ” ಮಹಾತ್ಮಾ ‘ಕಬೀರ’ರನ್ನು ಹೆಚ್ಚು ಮೆಚ್ಚಿದ್ದಾರೆ. ಇದೆಲ್ಲದರ ಸಾರಾಂಶವೇನೆಂದರೆ ಮಹಾದೇವಿಯವರೇ ಹೇಳಿದಂತೆ–” ವಿದೇಶಿ ಸಾಹಿತ್ಯ ಹಾಗೂ ಸಾಹಿತಿಗಳ ಪ್ರಭಾವವು ನನ್ನ ಮೇಲೆ ಎಳ್ಳಷ್ಟು ಆಗಿಲ್ಲ ಹಾಗೂ ಅದು ನನಗೆ ಸ್ವಲ್ಪವೂ ಸೇರುವದಿಲ್ಲ.”

ಡಾ. ಪದ್ಮಸಿಂಹ ಶರ್ಮಾ ‘ಕಮಲೇಶ’ ಎಂಬ ಒಬ್ಬ ಸಾಹಿತಿ ಅವರಿಗೆ– “ನಿಮ್ಮ ಕಾವ್ಯ ಗ್ರಂಥಗಳ ಹೆಸರುಗಳು ‘ನೀಹಾರ’, ‘ರಶ್ಮಿ’, ‘ನೀರಜಾ’, ‘ಸಾಂಧ್ಯಗೀತ’, ‘ದೀಪ

ಶಿಖಾ' ಮುಂತಾದವೆಲ್ಲವೂ ಆಕರ್ಷಣೆ ಹಾಗೂ ಸೌಂದರ್ಯ ದಿಂದ ಕೂಡಿದ್ದರೂ ಸಹ ಕ್ಷಣಿಕ ಹಾಗೂ ಪರಿವರ್ತನಶೀಲ ವಾಗಿ ಕಾಣಿಸುತ್ತವೆ?" ಎಂದು ಕೇಳಲಾಗಿ ಮಹಾದೇವಿ ಯವರು ಈ ರೀತಿಯಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ- "ವಿಶ್ವದ ಪ್ರತಿಯೊಂದು ವಸ್ತುವು ಪರಿವರ್ತನಶೀಲವಾಗಿದೆ. ಪ್ರತಿಕ್ಷಣ ಪರಿವರ್ತನವಾಗುತ್ತಲೇ ಇರುತ್ತದೆ. ಆದ್ದರಿಂದಲೇ ನನ್ನ ಕೃತಿಗಳ ಹೆಸರೂ ಸಹ ಈ ರೀತಿಯಾಗಿವೆ. ಇನ್ನು 'ಕ್ಷಣಭಂಗುರತೆ' ಎಲ್ಲಿಲ್ಲ? ಎಲ್ಲ ಕಡೆಗೂ ಅದರ ಹೊರತಾಗಿ ಬೇರಾವುದೂ ಇಲ್ಲ. ನಾನು ವಿಚಾರ ಮಾಡಿ ನನ್ನ ಕೃತಿಗಳ ಹೆಸರುಗಳನ್ನು ಈ ರೀತಿಯಾಗಿಟ್ಟಿಲ್ಲ. ಅವು ಹಾಗೆಯೇ ಅನಾಯಾಸ ಇಡಲ್ಪಟ್ಟಿವೆ. ಆಕರ್ಷಣೆ ಹಾಗೂ ಸೌಂದರ್ಯ ರಹಿತ ಕ್ಷಣಿಕ ವಸ್ತುಗಳು ಇರುವದಿಲ್ಲ."

ಆಧುನಿಕ ಕಾಲದಲ್ಲಿ ಎಲ್ಲಿಯಾದರೂ ಪರಿಶುದ್ಧ ರಹಸ್ಯಾನುಭೂತಿ ಕಂಡು ಬರುತ್ತಿದ್ದರೆ ಅದು ಶ್ರೀಮತಿ ವರ್ಮಾ ಅವರ ಕಾವ್ಯದಲ್ಲಿ ಮಾತ್ರ. ರಹಸ್ಯ ಭಾವನೆಯ ವಿಷಯವಾಗಿ ಚರ್ಚೆ ನಡೆದಲ್ಲೆಲ್ಲ ಶ್ರೀಮತಿ ಮಹಾದೇವಿ ವರ್ಮಾ ಅವರ ಹೆಸರು ಅನಾಯಾಸವಾಗಿ ಕೇಳಿಬರುತ್ತದೆ. ಹಿಂದೀ ರಹಸ್ಯ ಪರಂಪರೆಯಲ್ಲಿ ಭಕ್ತಮೀರಾ ಮತ್ತು ಶ್ರೀಮತಿ ಮಹಾದೇವಿವರ್ಮಾ ಈ ಇಬ್ಬರೇ ಕವಯಿತ್ರಿ ಯರು ಸಮರ್ಥರಾಗಿದ್ದಾರೆ. ಶ್ರೀಮತಿ ಮಹಾದೇವಿ

ಯವರನ್ನು ಭಕ್ತಮೀರಾಳಿಗೆ ಹೋಲಿಸಿ "ಆಧುನಿಕ ಮೀರಾ" ಎಂದು ಕರೆಯುವ ವಾಡಿಕೆಯುಂಟು.

ಮಹಾದೇವಿಯವರು ಶ್ರೇಷ್ಠ ದರ್ಜೆಯದಾರ್ಶನಿಕರು. ಇವರ ಆರಾಧ್ಯದೇವತೆ–ನಿರ್ಗುಣ ಬ್ರಹ್ಮ. ಅವನು ಅತ್ಯಂತ ಸೂಕ್ಷ್ಮ. ಆ ಸೂಕ್ಷ್ಮಾತಿ ಸೂಕ್ಷ್ಮ ಆರಾಧ್ಯ ದೇವನು ಅವರ ವಿರಹದಲ್ಲಿ ಲುಪ್ತನಾಗಿದ್ದಾನೆ. ಆ ನಿರ್ಗುಣಪ್ರಿಯತಮನಿಂದ ಅವರಿಗೆ ದೊರೆತ ಸರ್ವಸ್ವವೆಂದರೆ "ವೇದನೆ" ಮಾತ್ರ. ಅದೇ ಅವರ ಕಾವ್ಯದ ಕೇಂದ್ರ ಬಿಂದು ಹಾಗೂ ಕಾವ್ಯದ ಪ್ರಧಾನ ವಸ್ತುವೂ ಆಗಿದೆ. "ಜ್ಞಾನ"ವೇ ಮಹಾದೇವಿ ಯವರ ವಿರಹದುಃಖದ ಮೂಲ ಆಧಾರ.

ಮಹಾದೇವಿಯವರಿಗೆ ದುಃಖ ಅಥವಾ ವೇದನೆಯು ತುಂಬ ಪ್ರಿಯವಾಗಿರಲು ಕಾರಣವೇನೆಂದರೆ ಬಾಲ್ಯದಿಂದಲೇ ಬೌದ್ಧ ಧರ್ಮದ ಬಗ್ಗೆ ಅತ್ಯಧಿಕ ಶ್ರದ್ಧೆ–ಭಕ್ತಿ. ಈ ದುಃಖ ವಾದವು ಅವರನ್ನು ವಿಶ್ವವನ್ನು ಅರಿಯಲು ಪ್ರೇರೇಪಿ ಸುತ್ತದೆ.

ಇಲ್ಲಿಯವರೆಗೆ ಅವರ ಐದು ಕವನ ಸಂಕಲನಗಳು ಪ್ರಕಟವಾಗಿವೆ– ೧) ನೀಹಾರ ೨) ರಶ್ಮಿ ೩) ನೀರಜಾ ೪) ಸಾಂಧ್ಯಗೀತ ೫) ದೀಪಶಿಖಾ. ಯಾಮಾ ಎಂಬ ಕಾವ್ಯ ಗ್ರಂಥದಲ್ಲಿ ಮೊದಲಿನ ನಾಲ್ಕು ಸಂಕಲನಗಳು ಸಂಗ್ರಹಿಸಲ್ಪ ಟ್ಟಿವೆ. ಇವರ ಗದ್ಯ ಗ್ರಂಥಗಳಲ್ಲಿ 'ಶೃಂಖಲಾಕೀ ಕಡಿಯಾಂ'

ಮತ್ತು 'ಅತೀತಕೇಚಲಚಿತ್ರ' ಅತ್ಯಂತ ಪ್ರಸಿದ್ಧವಾಗಿವೆ. "ಮಹಾದೇವಿಕಾ ವಿವೇಚನಾತ್ಮಕ ಗದ್ಯ" ಎಂಬ ಗ್ರಂಥದಲ್ಲಿ ಶ್ರೀಮತಿ ಮಹಾದೇವಿಯವರ ವಿಮರ್ಶಕನ ರೂಪವು ಕಂಡು ಬರುತ್ತದೆ. ಈ ಸಂಗ್ರಹದಲ್ಲಿ ಆರು ಉತ್ಕೃಷ್ಟ ಸಾಹಿತ್ಯಿಕ ನಿಬಂಧಗಳು ಸಂಗ್ರಹಿಸಲ್ಪಟ್ಟಿವೆ– ೧) 'ಕಾವ್ಯ ಕಲಾ' ೨) 'ಛಾಯಾವಾದ' ೩) 'ರಹಸ್ಯವಾದ' ೪) 'ಗೀತ ಕಾವ್ಯ' ೫) 'ಯಥಾರ್ಥ ಔರ ಆದರ್ಶ' ಮತ್ತು ೬) 'ಸಾಮಯಿಕ ಸಮಸ್ಯಾ' ಮುಂತಾದವು. ಭಾವಾತ್ಮಕ ಹಾಗೂ ವೈಚಾರಿಕರ ಅಭೂತಪೂರ್ವ ಸಮನ್ವಯವೇ ಈ ನಿಬಂಧಗಳ ವೈಶಿಷ್ಟ್ಯ.

ಮಹಾದೇವಿ ಗೀತಕಾರರು, ಗದ್ಯಲೇಖಕಿಯರಲ್ಲದೇ ಅತ್ಯುತ್ತಮ ಚಿತ್ರಕಾರರು ಆಗಿದ್ದಾರೆ. 'ದೀಪಶಿಖಾ' ಹಾಗೂ 'ಯಾಮಾ' ಈ ಕಾವ್ಯ ಕೃತಿಗಳಲ್ಲಿ ಮಹಾದೇವಿ ಯವರ ಪ್ರಭಾವಪೂರ್ಣವಾದ ಸುಂದರ ಚಿತ್ರಗಳು ಕಣ್ಣಿಗೆ ಹಾಗೂ ಮನಸ್ಸಿಗೆ ಆಹ್ಲಾದವನ್ನುಂಟು ಮಾಡು ತ್ತವೆ. ಮಹಾದೇವಿಯವರಿಗೆ ಲಲಿತಕಲೆಗಳಲ್ಲಿ ಕಾವ್ಯಕಲೆ ಯಲ್ಲಿಯೇ ವಿಶೇಷ ಆಸಕ್ತಿ ಹಾಗೂ ಪ್ರೇಮ. ನಿಜವಾಗಿಯೂ ಲಲಿತಕಲೆಗಳಲ್ಲಿ ಪ್ರಮುಖವಾದ ಕಾವ್ಯಕಲೆ, ಸಂಗೀತಕಲೆ, ಮತ್ತು ಚಿತ್ರಕಲೆ– ಈ ಮೂರರ ತ್ರಿವೇಣೀ ಸಂಗಮ ಶ್ರೀಮತಿ ಮಹಾದೇವಿ ವರ್ಮಾ ಅವರೆಂದರೆ ಅತ್ಯುಕ್ತಿಯಾಗ ಲಾರದು. ಇಂಥ ಅದ್ಭುತ ವ್ಯಕ್ತಿತ್ವ ಸಂಪನ್ನರಾದ

ವ್ಯಕ್ತಿಗಳು ವಿಶ್ವದ ಯಾವದೇ ಸಾಹಿತ್ಯದಲ್ಲಿ ದೊರೆಯುವದು ಅತಿ ವಿರಳ.

## ೨. ಮಹಾದೇವಿ ವರ್ಮಾ ಮತ್ತು ಅವರ ಕಾವ್ಯ

**ಹಿನ್ನೆಲೆ :** ಭಾವುಕ ಸಾಹಿತ್ಯಕ್ಕೆ 'ಛಾಯಾವಾದ' ಎಂದು ಹೇಳುವದುಂಟು. ಇವಕ್ಕೆ ಆಂಗ್ಲ ಸಾಹಿತ್ಯದಲ್ಲಿ 'ರೋಮ್ಯಾಂಟಿಸಿಜಂ' ಎಂದು ಹೇಳುವದುಂಟು. ಈ ಛಾಯಾವಾದೀ ಕವಿಗಳ ಮನಸ್ಸು ಸದಾ ಪ್ರಕೃತಿಯ ಸೊಬಗಿಗೆ ಮನಸೋಲುತ್ತದೆ. ('ಭಾರತೀಯ ಸಂಸ್ಕೃತಿ ದರ್ಶನ'- ಹಿಂದೀ ಭಾಷೆ ಮತ್ತು ಸಾಹಿತ್ಯ ಪುಟ ೪೭೩). ಹಿಂದೀ ಸಾಹಿತ್ಯ ಪ್ರಪಂಚದಲ್ಲಿ ಈ 'ಛಾಯಾವಾದ'ವು ದೊಡ್ಡ ಆಂದೋಲನದ ರೂಪತಾಳಿತು. 'ರಹಸ್ಯಭಾವ'ವು ಅತ್ಯಂತ ಪ್ರಾಚೀನವಾದರೂ ಸಹ ಆಧುನಿಕವಾಗಿದೆ ಮತ್ತು 'ಛಾಯಾವಾದೀ' ಕಾವ್ಯದ ಆಂದೋಲನಕ್ಕೆ ಸಂಬಂಧಿಸಿದುದಾಗಿದೆ.

ಹಿಂದೀ ಛಾಯಾವಾದೀ ಕವಿಗಳಲ್ಲಿ ರಹಸ್ಯವಾದಿಯ ರೂಪದಲ್ಲಿ ಪ್ರಮುಖರಾದವರಲ್ಲಿ ಮಹಾದೇವಿ ವರ್ಮಾ ಒಬ್ಬರು. ಕನ್ನಡ ಸಾಹಿತ್ಯದಲ್ಲಿ ಈ 'ರಹಸ್ಯ ಎಂಬ

ಶಬ್ದದ ಅರ್ಥಗೂಢ, ಗೌಪ್ಯ, ತಿಳಿಯಲು ಮತ್ತು ಕಾರಣಗಳಿಂದ ಸಮರ್ಥಿಸಲು ಅಸಾಧ್ಯವಾದುದು, ಅನಿರ್ದಿಷ್ಟವಾದುದು, ಕೇವಲ ಭಾವನಾತ್ಮಕವಾದುದು ಎಂಬ ಅರ್ಥಗಳಲ್ಲಿ ಉಪಯೋಗಿಸಿರುವದು ಕಂಡು ಬರುತ್ತದೆ. ಇವಕ್ಕೆ 'ಅನುಭಾವ'ವೆಂದು ಕರೆಯಲಾಗುತ್ತದೆ.

ಆಂಗ್ಲ ಭಾಷೆಯಲ್ಲಿ ಈ 'ಅನುಭಾವ' ಅಥವಾ 'ರಹಸ್ಯವಾದ'ಕ್ಕೆ 'ಮಿಸ್ಟಿಸಿಸಮ್' (Mysticism) ಎಂದು ಹೆಸರು. ಇದು ಅತ್ಯಂತ ಪ್ರಾಚೀನವಾದುದು ಮತ್ತು 'ಉಪನಿಷತ್ತು'ಗಳು ಈ ಅನುಭಾವ ಸಾಹಿತ್ಯದ ಮೂಲಗ್ರಂಥಗಳು. ಈ 'ಅನುಭಾವ' ಎಂಬುದು ಶಿವ ಶರಣರು ಆಧ್ಯಾತ್ಮಿಕ ಪ್ರಪಂಚಕ್ಕೆ ಕೊಟ್ಟ ಅಮೂಲ್ಯ ಕಾಣಿಕೆ. ಇದರಲ್ಲಿ 'ಬ್ರಹ್ಮ ಸಾಕ್ಷಾತ್ಕಾರ', 'ಬ್ರಹ್ಮಾನುಭೂತಿ' (Mysticism) ಎಂಬ ಮಾತುಗಳ ಅರ್ಥ ಒಳಗೊಂಡಿದೆ.

"ಅನುಭಾವ ಮಾರ್ಗಕ್ಕೆ" ಹಿಂದೀ ಸಾಹಿತ್ಯದಲ್ಲಿ "ರಹಸ್ಯವಾದ" ಎಂದು ಕರೆಯಲಾಗುತ್ತಿದೆ. ಈ 'ರಹಸ್ಯವಾದವು' ೧೯೨೦ನೇ ಇಸ್ವಿಯ ನಂತರ ಹಿಂದಿಯಲ್ಲಿ ಕಂಡು ಬರುತ್ತದೆ.

ಮಹಾದೇವಿ ವರ್ಮಾ ಅವರು ಕನ್ನಡದ ಶಿವಶರಣೆ ಅಕ್ಕಮಹಾದೇವಿಯಂತೆಯೇ ತಮ್ಮ ಪ್ರೇಮವನ್ನೆಲ್ಲ "ನಿರ್ಗುಣ ಬ್ರಹ್ಮ"ನಿಗೆ ಧಾರೆಯೆರೆದಿದ್ದಾರೆ. ಅವನನ್ನೆ

ಸಾಕ್ಷಾತ್ಕರಿಸಿಕೊಳ್ಳಲು, ಅವನ ಸತಿಯಾಗುವ ಆಧ್ಯಾತ್ಮಿಕ ಮಾರ್ಗವನ್ನು ಕೈಕೊಂಡಿದ್ದಾರೆ. ಇದು ಅವರ ಕಾವ್ಯದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಹಿಂದೀ ಮತ್ತು ಕನ್ನಡ ಸಾಹಿತ್ಯದಲ್ಲಿ ಅವಿಸ್ಮರಣೀಯರಾದಂಥ ಮಹಾದೇವಿದ್ವಯರನ್ನು ಅವರವರ ಕಾವ್ಯದೊಂದಿಗೆ ಹೋಲಿಸಿ ನೋಡಬಹುದು.

ಅಕ್ಕಮಹಾದೇವಿಯಂತೆಯೇ ಮಹಾದೇವಿ ವರ್ಮಾ ಅವರು ತಮ್ಮ ಪ್ರಿಯತಮ (ನಿರ್ವಿಕಾರ ನಿರ್ಗುಣಬ್ರಹ್ಮ)ನನ್ನು ಕಾಣಲು ಆತುರತೆ, ಕಾತರತೆ, ಅವನ ಸಂಯೋಗ ಅಥವಾ ಸಾಮೀಪ್ಯದ ಅಭಾವದಲ್ಲಿ ವಿರಹವೇದನೆಯಿಂದ ಬಳಲುವಿಕೆ ಮತ್ತು ಆ ಅಜ್ಞಾತ ಪ್ರಿಯತಮನ ವಿರಹ ದುಃಖದಲ್ಲಿಯೇ ಸರ್ವಸ್ವ ತ್ಯಾಗ, ಹಾಗೂ ಆತ್ಮಸಮರ್ಪಣೆಯಲ್ಲಿ ಪರಮ ಮುಕ್ತಿ ಪಡೆದು ಹಿಂದೀ ರಹಸ್ಯವಾದೀ ಕಾವ್ಯ (Mystic Poetry)ದಲ್ಲಿ ಅಜರಾಮರರಾಗಿದ್ದಾರೆ.

ಶ್ರೀಮತಿ ವರ್ಮಾ ಅವರು ತತ್ಕಾಲೀನ ಕಾವ್ಯ ಸಂಪ್ರದಾಯದಿಂದ ಪ್ರಭಾವಿತರಾಗಿದ್ದರೂ ತಮ್ಮದೇ ಆದ ಸ್ವತಂತ್ರ ಭಾಷೆ, ಛಂದಸ್ಸು, ಶೈಲಿಯಲ್ಲಿ ಕಾವ್ಯ ರಚಿಸಿ ನವಯುಗ ನಿರ್ಮಿಸಿ ಯುಗ ನಿರ್ಮಾಪಕರೆನಿಸಿದ್ದಾರೆ.

ಅಂತರಂಗ ವೇದನೆಯ ಮುಖಾಂತರವೇ ಅವರು ಆ ಅಜ್ಞಾತ ಪ್ರಿಯತಮನಿಗೋಸ್ಕರ ತಮ್ಮ ಸ್ವಾಭಾವಿಕ

ಅನುರಾಗವನ್ನು ವ್ಯಕ್ತಪಡಿಸಿದ್ದಾರೆ- ಮತ್ತು ಅದರೊಡನೆ ಅಂದರೆ ವೇದನೆಯೊಡನೆಯೇ ಜೀವಿಸುವ ಅಭಿಲಾಷೆಯುಳ್ಳವರಾಗಿದ್ದಾರೆ. ಇಷ್ಟೇ ಅಲ್ಲದೆ ಆ ವೇದನೆ ಅಥವಾ 'ಪೀಡೆ'ಯೇ ಅವರ ಜೀವನದ ಗುರಿಯಾಗಿಬಿಟ್ಟಿದೆ. ಹಾಗೂ ಅದರಲ್ಲಿಯೇ ಅಲೌಕಿಕ ತೃಪ್ತಿ ಮತ್ತು ಸುಖವನ್ನು ಪಡೆಯಲು ಅಪೇಕ್ಷಿಸುತ್ತಾರೆ. ಆ ಸುಖದ ಮುಂದೆ ಸಂಯೋಗ (ಮಿಲನ) ಸುಖವನ್ನು ಸಹ ಅವರು ತುಚ್ಛೀಕರಿಸುತ್ತಾರೆ. ಅವರ ಶಬ್ದಗಳಲ್ಲಿಯೇ ಹೇಳುವದಾದರೆ-

"ಸಂಯೋಗದ ಹೆಸರೆತ್ತಬೇಡ, ನಾನು ವಿರಹದಲ್ಲಿಯೇ ಚಿರ (ಅಮರ)ಳಾಗಿದ್ದೇನೆ." ಈ ವಿರಹದುಃಖ ಅಥವಾ ವೇದನೆಯೇ ಅವರ ಕಾವ್ಯದ ಜೀವಾಳ. ಅದೇ ಅವರ ಸರ್ವಸ್ವವೂ ಆಗಿದೆಯಲ್ಲದೆ ಅದರಲ್ಲಿಯೇ ಪೂರ್ಣತೆ ಅಥವಾ ಪರಮಮುಕ್ತಿ ಮತ್ತು ಅಲೌಕಿಕ ಸುಖವನ್ನು ಪಡೆಯುವ ದೃಢವಿಶ್ವಾಸವುಳ್ಳವರಾಗಿದ್ದಾರೆ.

ವಿಶ್ವದ ಒಂದು ಕಡೆಗೆ ಅಲೌಕಿಕ ಸೌಂದರ್ಯ, ಮತ್ತೊಂದು ಕಡೆಗೆ ಅಪಾರ ವೇದನೆ- ಇವುಗಳ ಮಧ್ಯೆ ಮಹಾದೇವಿವರ್ಮಾ ಅವರ ಕಾವ್ಯ ಸೃಷ್ಟಿಯಾಗುತ್ತದೆ-

"ಸಂಸ್ಕೃತಿಯ ಚಿತ್ರಪಟದ;
ಇವೆರಡೂ ಎರಡು ದಿಶೆಗಳು
ಅದಿಲ್ಲದೇ ನನ್ನ ದುಃಖವು ಶೂನ್ಯ,
ನಾನಿಲ್ಲದೇ ಆ ಸೌಂದರ್ಯ ನೀರಸ.

ಮಹಾದೇವಿಯವರಿಗೆ ದುಃಖ ಅಥವಾ ವೇದನೆ ಎಷ್ಟೊಂದು ಪ್ರಿಯವಾಗಿದೆ ಎಂದರೆ ಅಲ್ಲಿಯೇ ತಮ್ಮ ಪ್ರಿಯತಮನನ್ನು ಕಂಡಿದ್ದಾರೆ. ಮತ್ತು ದುಃಖವೇ ಅವರಿಗೆ ಆ ಪರಬ್ರಹ್ಮ ಪರಮಾತ್ಮನಾದ ನಿರ್ಗುಣ ಪ್ರಿಯತಮನನ್ನು ದೊರಕಿಸಿಕೊಡುತ್ತದೆ–

"ನಿನ್ನನ್ನು ದುಃಖದಲಿ ಅರಸಿವೆನು
ನಿನ್ನೊಳಗೆ ದುಃಖವನು ಅರಸುವೆನು"

ಭಾವಗೀತೆ ಅಥವಾ ಗೀತಿಕಾವ್ಯ ರಚನೆಯಲ್ಲಿ ಮಹಾದೇವಿಯವರಿಗೆ ದೊರೆತಂಥ ಯಶಸ್ಸು ಮತ್ತಾರಿಗೂ ದೊರೆತಿಲ್ಲ. ಇದಲ್ಲದೇ, ಭಾಷೆಯ ಇಂಥ ಸ್ನಿಗ್ಧವಾದ ಮತ್ತು ಪ್ರಾಂಜಲ ಪ್ರವಾಹವಾಗಲಿ ಮತ್ತು ಹೃದಯದ ಇಂಥ ಭಾವಭಂಗಿಯಾಗಲಿ ಬೇರೆಡೆ ಕಾಣಲು ಸಿಗುವದು ವಿರಳ. ಅವರ ಕಾವ್ಯದ ತುಂಬೆಲ್ಲ ಹೃದಯವನ್ನು ಸೂರೆಗೊಳ್ಳುವಂಥ ಅದ್ಭುತ ಪಂಕ್ತಿಗಳ ವೈಭವವು ಅವರ್ಣನೀಯವೂ ಆಗಿದೆ.

ಮಹಾದೇವಿಯವರ ಕಾವ್ಯವನ್ನು ಅರ್ಥಮಾಡಿಕೊಳ್ಳಲು ಛಾಯಾವಾದ (Romanticism)ವನ್ನು ತಿಳಿದುಕೊಳ್ಳುವದು ಒಳ್ಳೆಯದು.

# ೩. ಛಾಯಾವಾದ

**ಹಿನ್ನೆಲೆ** : ೧೯೨೦ ರ ವರೆಗೆ 'ಹಿಂದೀ ಖಡೀಬೋಲಿ' ಯಲ್ಲಿ ಕಾವ್ಯ ರಚನೆ ಸಮೃದ್ಧವಾಗಿ, ರಾಷ್ಟ್ರಕವಿ ಮೈಥಿಲೀ ಶರಣಗುಪ್ತ, ಮುಕುಬಧರ ಪಾಂಡೆ ಮುಂತಾದವರು 'ಹಿಂದೀ ಖಡೀಬೋಲಿ ಕಾವ್ಯ'ಕ್ಕೆ ಅತ್ಯಂತ ಕಲ್ಪನಾಮಯ ವಾಗಿ, ಚಿತ್ರಮಯ ಮತ್ತು ಅಂತರ್ಭಾವ ವ್ಯಂಜಕರೂಪ ಕೊಡಲು ಪ್ರವೃತ್ತರಾಗಿದ್ದರು. ಕಾವ್ಯಕ್ಷೇತ್ರದ ಸಮೃದ್ಧಿ ಗಾಗಿ ಪ್ರಕೃತಿಯ ಸಾಧಾರಣ ಹಾಗೂ ಅಸಾಧಾರಣ ವಸ್ತು ಗಳೊಡನೆ ತಮ್ಮ ಶಾಶ್ವತ ಸಂಬಂಧ ನಿಜವಾದ ಮಾರ್ಮಿಕ ಅನುಭವ ಮಾಡಿಕೊಂಡು ಅವರು ಸಾಗಿದ್ದರು. ಈ ಸ್ವಚ್ಛಂದ ನೂತನ ಪದ್ಧತಿ ತನ್ನ ಹೊಸ ಮಾರ್ಗವನ್ನು ಶೋಧಿಸುತ್ತಿರಲಾಗಿ ಶ್ರೀ ರವೀಂದ್ರನಾಥರ ರಹಸ್ಯಾತ್ಮಕ (ಆಧ್ಯಾತ್ಮಿಕ) ಕವಿತೆಗಳ (ಗೀತಾಂಜಲಿ) ಪ್ರಭಾವವು ಎಲ್ಲೆಡೆ ಹರಡಿತು. ಇದರಿಂದ ಅನೇಕ ಕವಿಗಳು ಪ್ರಭಾವಿತರಾಗಿ 'ರಹಸ್ಯವಾದ' ಮತ್ತು 'ಪ್ರತೀಕವಾದ' ಅಥವಾ 'ಚಿತ್ರ ಭಾಷಾವಾದ'ವನ್ನೇ ಏಕಮಾತ್ರ ಧ್ಯೇಯವನ್ನಾಗಿ ಮಾಡಿ ಕೊಂಡು ನಡೆದರು. 'ಚಿತ್ರ ಭಾಷೆ' ಅಥವಾ ಅಭಿವ್ಯಂಜನಾ ಪದ್ಧತಿ'ಯಲ್ಲಿಯೇ ಅವರೆಲ್ಲರ ದೃಷ್ಟಿ ನೆಡಲು ಅದನ್ನು ಅಭಿವ್ಯಕ್ತಪಡಿಸಲಿಕ್ಕೆ 'ಲೌಕಿಕ' ಅಥವಾ 'ಅಲೌಕಿಕ' ಪ್ರೇಮಕ್ಷೇತ್ರವೇ ಯೋಗ್ಯವೆಂದನಿಸಿತು. ಇಲ್ಲಿ ರಹಸ್ಯ

ಭಾವನೆ ಮತ್ತು ಅಭಿವ್ಯಂಜನಾ ಪದ್ಧತಿಗೆ ಮಾತ್ರ ವಿಶೇಷ ಮಹತ್ವ ಕೊಟ್ಟಿದ್ದರಿಂದ ಮತ್ತು "ಕಾವ್ಯ"ವು ಕಾಲ್ಪನಿಕ ಸೃಷ್ಟಿ" ಎಂದು ತಿಳಿಯುವ ಪ್ರವೃತ್ತಿ ಪ್ರಾರಂಭವಾದದ್ದರಿಂದ 'ಭಾವಾನುಭೂತಿಯ ಸ್ವರೂಪವೂ ಕೂಡ ಕಲ್ಪಿತವಾಗ ಹತ್ತಿತು.

'ಛಾಯಾವಾದ' ಶಬ್ದದ ಪ್ರಯೋಗವು ಎರಡು ಭಿನ್ನ ಅರ್ಥಗಳಲ್ಲಿ ಬರುತ್ತದೆ- ಒಂದು 'ರಹಸ್ಯವಾದ'ದ ಅರ್ಥದಲ್ಲಿ. ರಹಸ್ಯವಾದದಲ್ಲಿ ಕವಿ ಆ ಅನಂತ ಮತ್ತು ಅಜ್ಞಾತ ಪ್ರಿಯತಮನನ್ನೇ ಆಲಂಬನವನ್ನಾಗಿ ಮಾಡಿಕೊಂಡು ಅತ್ಯಂತ ಚಿತ್ರಮಯೀ ಭಾಷೆಯಲ್ಲಿ ತನ್ನ ಪ್ರೇಮವನ್ನು ಅನೇಕ ಪ್ರಕಾರವಾಗಿ, ವಿವಿಧ ರೂಪದಲ್ಲಿ ವ್ಯಕ್ತಮಾಡುತ್ತಾನೆ. ಪ್ರತಿಭಾವಂತರಾದ ಅತ್ಯಂತ ಶ್ರೇಷ್ಠ ಸಂತರ ಸಾಧಕರ ವಾಣಿಯ ಅನುಕರಣೀಯ ರೂಪದಲ್ಲಿ ಸೃಜಿಸಲ್ಪಟ್ಟ ಕಾವ್ಯ ಕೃತಿಗಳು ಈ ರಹಸ್ಯವಾದೀ ಸಾಹಿತ್ಯ ಶ್ರೇಣಿಯಲ್ಲಿಯೇ ಬರುತ್ತವೆ. ಅವು ಸಾಧಕರ ಸಮಾಧಿ ಸ್ಥಿತಿಯಲ್ಲಿ ನಾನಾ ರೂಪಕಗಳ ರೂಪದಲ್ಲಿ ಸೃಷ್ಟಿಸಲ್ಪಟ್ಟ ಆಧ್ಯಾತ್ಮಿಕ ಜ್ಞಾನದ ಭಾಸವನ್ನು ಕೊಡುವಂಥಹವೆಂದು ತಿಳಿಯಲಾಗುತ್ತಿತ್ತು. ಈ "ರೂಪಾತ್ಮಕಭಾಸ"ಕ್ಕೆ ಯುರೋಪದಲ್ಲಿ "ಛಾಯಾ" ಎಂದು ಕರೆಯಲಾಗುತ್ತಿತ್ತು. ಇದಕ್ಕೆ ಪಾಶ್ಚಾತ್ಯ ಸಾಹಿತ್ಯದಲ್ಲಿ "Romanticism"- ಎಂದು ಕರೆಯಲಾಗುತ್ತಿದೆ. ಇದರ ಪರಿಣಾಮವಾಗಿ ಬಂಗಾಲದಲ್ಲಿ "ಬ್ರಹ್ಮೋಸಮಾಜ" ದಲ್ಲಿ ಅದೇ ವಾಣಿಯ ಅನುಕರಣೆಯಲ್ಲಿ ಆಧ್ಯಾತ್ಮಿಕ ಗೀತೆ

ಭಜನೆಗಳು ತಯಾರಾಗುತ್ತಿದ್ದವು. ಅವುಗಳಿಗೆ "ಛಾಯಾವಾದೀ ಗೀತೆ ಅಥವಾ ಕಾವ್ಯ" ಎಂದು ಕರೆಯಲಾಗಹತ್ತಿತು. ಬರಬರುತ್ತ ಈ "ಛಾಯಾವಾದ" ಶಬ್ದವು ಧಾರ್ಮಿಕ ಕ್ಷೇತ್ರದಿಂದ ಬಂಗಾಲದಲ್ಲಿ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿತು. ಮತ್ತೆ ವಿಶ್ವಕವಿ ರವೀಂದ್ರರ ಪ್ರಭಾವವು ಎಲ್ಲೆಡೆಗೆ ಹರಡಿ ಅದು ಹಿಂದೀ ಸಾಹಿತ್ಯ ಕ್ಷೇತ್ರದಲ್ಲಿಯೂ ಪ್ರಕಟವಾಯಿತು.

"ಛಾಯಾವಾದ" ಶಬ್ದದ ಇನ್ನೊಂದು ಅರ್ಥ "ಕಾವ್ಯಶೈಲಿ" ಅಥವಾ "ವಿಶೇಷ ಪದ್ಧತಿಯ ವ್ಯಾಪಕ ಅರ್ಥ". ಸನ್ ೧೮೮೫ರಲ್ಲಿ ಫ್ರಾನ್ಸದಲ್ಲಿ ರಹಸ್ಯವಾದೀ ಕವಿಗಳ ಒಂದು ದೊಡ್ಡದಲವೇ ಸಿದ್ಧವಾಯಿತು. ಅದಕ್ಕೆ "ಪ್ರತೀಕವಾದೀ ದಲ (Symbolist)" ಎಂದು ಕರೆಯಲಾಯಿತು. ಅವರು ತಮ್ಮ ಕಾವ್ಯದಲ್ಲಿ ಪ್ರಸ್ತುತ (ಉಪಮೇಯ) ಪ್ರತೀಕಗಳ ಬದಲಾಗಿ ಹೆಚ್ಚಾಗಿ ಅಪ್ರಸ್ತುತ ಪ್ರತೀಕ (ಉಪಮಾನ) ಗಳ ಪ್ರಯೋಗವನ್ನು ಮಾಡುತ್ತಿದ್ದರು. ಅವರ ಈ ವಿಶಿಷ್ಟ ಶೈಲಿಗೆ "ಪ್ರತೀಕವಾದ" ಎಂದು ಕರೆದು ಅದನ್ನು ಬಳಸಲು ಪ್ರಾರಂಭವಾಯಿತು. ಆಧ್ಯಾತ್ಮಿಕ ಅಥವಾ ಈಶ್ವರ ಪ್ರೇಮಸಂಬಂಧೀ ಕವಿತೆಗಳಲ್ಲದೇ ಉಳಿದೆಲ್ಲ ಪ್ರಕಾರದ ಕವಿತೆಗಳನ್ನೂ ಕೂಡ ಇದೇ "ಪ್ರತೀಕಶೈಲಿ"ಯಲ್ಲಿ ಬರೆಯುವ ರೂಢಿ ಫ್ರಾನ್ಸದಲ್ಲಿ ಆರಂಭವಾಯಿತು. ಇದೇ ಪ್ರಕಾರವಾಗಿ ಹಿಂದೀ ಕಾವ್ಯದಲ್ಲಿಯೂ ಸಹ ವ್ಯಾಪಕ ಅರ್ಥದಲ್ಲಿ "ಛಾಯಾವಾದ" ಶಬ್ದದ ಪ್ರಯೋಗವೂ ಈಶ್ವರೀಯ

ಪ್ರೇಮ ಸಂಬಂಧೀ ಅಥವಾ ರಹಸ್ಯವಾದೀ ಕವಿತೆಗಳಲ್ಲದೇ ಉಳಿದೆಲ್ಲ ಪ್ರಕಾರದ ಕವಿತೆಗಳನ್ನೂ ಸಹ ಇದೇ ಪ್ರತೀಕ ಶೈಲಿಯಲ್ಲಿ ರಚಿಸಲಾಯಿತು.

ಛಾಯಾವಾದೀ ಕಾವ್ಯವು ಹೆಚ್ಚಾಗಿ ಪ್ರೇಮಗೀತಾತ್ಮಕ ವಾಗಿದ್ದರಿಂದ ಆಧುನಿಕ ಕಾವ್ಯಕ್ಷೇತ್ರದಲ್ಲಿ ಮೊದಮೊದಲು ಅಷ್ಟೊಂದು ತೀವ್ರಗತಿಯಿಂದ ನಡೆಯಲಿಲ್ಲ. ಬರಬರುತ್ತ ಛಾಯಾವಾದದಲ್ಲಿ ಕಾವ್ಯಶೈಲಿಗೆ ವಿಶೇಷ ಮಹತ್ವವು ಪ್ರಾಪ್ತ ವಾಗಿದ್ದರಿಂದ ಛಾಯಾವಾದೀ ಕಾವ್ಯದ ವಿಕಾಸವು ಚೆನ್ನಾಗಿ ಆಯಿತು. 'ಛಾಯಾವಾದ'ದ ವಿಷಯವಾಗಿ ಶ್ರೀಮತಿ ವರ್ಮಾ ಅವರು ತಮ್ಮ "ಯಾಮಾ" ಕವನ ಸಂಕಲನದ ಭೂಮಿಕೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ.

ನಿಜವಾಗಿ ಹೇಳುವದಾದರೆ, ಮಹಾದೇವಿಯವರದು "ಹೃದಯವಾದ". ಆದರೆ, ಕಾವ್ಯದಲ್ಲಿ ವಿಶೇಷವಾಗಿ ಅವರ "ದುಃಖವಾದ"ವು ವ್ಯಕ್ತವಾಗಿದೆ. ಅವರನ್ನು ಯಾವದೇ ವಾದದ ಬಂಧನದಲ್ಲಿ ಬಂಧಿಸುವದು ಶ್ರೇಯಸ್ಕರವಲ್ಲ.

## ೪. ಮಹಾದೇವಿ ವರ್ಮಾ ಅವರ ಕಾವ್ಯ ಕೃತಿಗಳು

ಇದುವರೆಗೆ ರಚನಾ ಕಾಲದ ದೃಷ್ಟಿಯಿಂದ ಮಹಾ-ದೇವಿಯವರ ಐದು ಕವನ ಸಂಕಲನಗಳು ಪ್ರಕಾಟವಾಗಿವೆ–

೧) 'ನೀಹಾರ' ೨) 'ರಶ್ಮಿ' ೩) 'ನೀರಜಾ' ೪) 'ಸಾಂಧ್ಯ ಗೀತ' ಹಾಗೂ ೫) 'ದೀಪಶಿಖಾ'.

'ನೀಹಾರ', 'ರಶ್ಮಿ', 'ನೀರಜಾ' ಮತ್ತು 'ಸಾಂಧ್ಯ ಗೀತ'ದ ೧೮೫ ಕವಿತೆಗಳು ಒಂದೇ ಕೃತಿ "ಯಾಮಾ" ಎಂಬ ಸಂಕಲನದಲ್ಲಿ ಸಂಗ್ರಹಿಸಲ್ಪಟ್ಟಿವೆ. ಈ ಪ್ರಕಾರವಾಗಿ ಇಂದು "ಯಾಮಾ" ಮತ್ತು "ದೀಪಶಿಖಾ" ಇವೇ ಮಹಾ-ದೇವಿಯವರ ಎರಡು ಪ್ರಮುಖ ಹಾಗು ಬೃಹತ್ ಕವನ ಸಂಕಲನಗಳು. ಈ ಕಾವ್ಯಗ್ರಂಥಗಳಲ್ಲಿ ಮಹಾದೇವಿ ಯವರ ಆಧ್ಯಾತ್ಮಿಕ ಚಿಂತನೆ ಹಾಗು ರಹಸ್ಯವಾದೀ ಭಾವನೆ ಗಳ ಪರಿಚಯವಾಗುತ್ತದೆ.

ಮಹಾದೇವಿಯವರ ಗೀತಗಳು ಉಜ್ವಲ ಪ್ರೇಮ ಗೀತಗಳು. ಈ ಎಲ್ಲ ಗೀತಗಳು ಒಂದಕ್ಕೊಂದು ಪರಸ್ಪರ ಸಂಬಂಧಿತವಾಗಿರುತ್ತವೆ. "ನೀಹಾರ" ದಲ್ಲಿ ಆಕರ್ಷಣೆ ಮತ್ತು ಪೀಡೆಯ ಅನುಭೂತಿ, "ರಶ್ಮಿ"ಯಲ್ಲಿ ದಾರ್ಶನಿಕ ಸಿದ್ಧಾಂತಗಳು, "ನೀರಜಾ"ದಲ್ಲಿ ವಿರಹವ್ಯಥೆ, "ಸಾಂಧ್ಯ ಗೀತ" ದಲ್ಲಿ ಆತ್ಮತೋಷ ಹಾಗು "ದೀಪಶಿಖಾ" ದಲ್ಲಿ ಸಾಧನೆಯ ಸ್ಥಿತಿಯ ಪ್ರತಿಪಾದನೆಯುಂಟು. ಮಹಾದೇವಿ ಯವರ ಈ ಎಲ್ಲ ಕಾವ್ಯಗ್ರಂಥಗಳು ಹೆಸರುಗಳೂ ಸಹ ಪ್ರತೀಕಾತ್ಮಕವಾಗಿವೆ.

ಈ ಕವನ ಸಂಕಲನಗಳಲ್ಲಿ ಮಹಾದೇವಿಯವರ ಕಾವ್ಯದ ಕ್ರಮಿಕ ವಿಕಾಸವನ್ನು ಕಂಡುಕೊಳ್ಳಬಹುದು.

"ದೀಪಶಿಖಾ"ದ ವರೆಗೆ ತಲುಪುತ್ತ ಇವರ ಹೃದಯವು ಕ್ರಮಶಃ ಹಿಗ್ಗುತ್ತ ಹೋಗಿವೆ ಮತ್ತು ಅಭಿವ್ಯಕ್ತಿಯು ಸುಸ್ಪಷ್ಟವಾಗುತ್ತ ಹೋಗಿದೆ.

## ೧) 'ನೀಹಾರ'

'ನೀಹಾರ' ಮಹಾದೇವಿ ಅವರ ಪ್ರ-ಪ್ರಥಮ ಕಾವ್ಯ ಸಂಗ್ರಹ. ಇದರಲ್ಲಿ ಅವರ ಪ್ರಾರಂಭಿಕ ರಚನೆಯ ಸಮಸ್ತ ಸೀಮೆ ಹಾಗು ಸಂಭಾವನೆಗಳುಂಟು. ಇದು ಮಹಾದೇವಿ ಯವರ ಕಾವ್ಯದ ನಿರ್ಮಾಣಾವಸ್ಥೆಯ ಬಾಲ್ಯ ಕಾಲ. ಸುಮಿತ್ರಾನಂದಪಂತರ 'ಛಾಯಾವಾದ'ದಿಂದ ಪ್ರಭಾವಿತ ರಾಗಿದ್ದರ ಪರಿಣಾಮವಾಗಿ 'ನೀಹಾರ' ಕೃತಿಯು ನಿರ್ಮಾಣ ವಾಯಿತು. ಇದರಲ್ಲಿ ಅಸ್ಪಷ್ಟತೆಯುಂಟು, ಅನುಭೂತಿ ಗಳಲ್ಲಿ ಕುತೂಹಲ ಮಿಶ್ರಿತವಾದ ವೇದನೆಯುಂಟು. ['ಯಾಮಾ'— ಪುಟ ೬]. ಶಿಶು ಸದೃಶ ವಿಸ್ಮಯ ಭಾವನೆ ಯುಂಟು. ಇದರಲ್ಲಿದ್ದ ಅವ್ಯಕ್ತ ವೇದನೆಯೇ ಮುಂದೆ ಮಹಾದೇವಿಯವರ ಕಾವ್ಯದ ಆಕರ್ಷಣೆ ಆಗುತ್ತದೆ. ಅದು ಇನ್ನೂ ನಿರ್ಮಾಣಾವಸ್ಥೆಯಲ್ಲಿಯೇ ಇದೆ. 'ಅಂತರ್ಮುಖೀ ದೃಷ್ಟಿ' ಮತ್ತು 'ಅಹಂ'ದ ಪರಿಣಾಮವಾಗಿ ಆತ್ಮದರ್ಶನವು, ಈ ಪ್ರಥಮ ಕೃತಿಯಲ್ಲಿ ಪ್ರಾರಂಭವಾಗಿ ಹೋಗಿದೆ. 'ಗೀತಿ ಕಾವ್ಯ'ದ ಅದ್ಭುತ ಆಕರ್ಷಣೆ ಮತ್ತು ವೇದನೆಯ ಅನು ಭೂತಿ ಇಲ್ಲಿ ಇನ್ನೂ ಆರಂಭಿಕ ಅವಸ್ಥೆಯಲ್ಲುಂಟು. 'ನೀಹಾರ'ವು ನಿಜವಾಗಿಯೂ "ಅಜ್ಞಾತ ಆರಾಧ್ಯದೇವತೆ"ಯ

ಉಪಾಸನೆಯು ಪ್ರಥಮ ಸೋಪಾನವಾಗಿದೆ. 'ಛಾಯಾವಾದ'ದ ಪ್ರಾರಂಭ ಹಾಗು ಅದರ ಸ್ಪಷ್ಟರೂಪವು ಇಲ್ಲಿಂದಲೇ ಕಂಡು ಬರುತ್ತದೆ. ಇಲ್ಲಿ ವಿಷಾದ ಮತ್ತು ವೇದನೆಗಳ ತೀವ್ರತೆಯುಂಟು. 'ರಹಸ್ಯ'ವು ಇನ್ನೂ ಸಾಧನೆಯ ಮಾರ್ಗವನ್ನು ಕಂಡುಕೊಳ್ಳುವ ಪ್ರಯತ್ನದಲ್ಲಿರುತ್ತದೆ. ಇಲ್ಲಿ 'ಸಸೀಮ'ದ ಪರ್ಯವಸಾನ 'ಅಸೀಮ'ದಲ್ಲಿ ಕಾಣುವ ಪ್ರಬಲವಾದ ಆಕಾಂಕ್ಷೆಯಿದ್ದರೂ ಸಹ ತನ್ನ ಅಸ್ತಿತ್ವದ ರಕ್ಷಣೆಯ ಪ್ರಯತ್ನವುಂಟು. ಈ ಗೀತಗಳಲ್ಲಿ ಒಂದು 'ಕರೆ'ಯುಂಟು, ಗಾಳಿಯ ಒಂದು ಸೆಳೆತ, ತರಂಗಗಳ ಒಂದು ಪರಿವರ್ತನೆ, ನಕ್ಷತ್ರಗಳ ಕೆಲವೊಂದು ಸಂದೇಶಗಳುಂಟು. ವಿಸ್ಮಯ ಭಾವನೆಯೇ ಛಾಯಾವಾದದ ಪ್ರಮುಖ ಗುಣ—

"ಉದುರುತ್ತಿರುವ ಅಶ್ರುಜಲದ ಹಾಗೆ ಸುಕುಮಾರ
ಹರಡುತ್ತಿರುವ ಸ್ವಪ್ನಗಳ ಹಾಗೆ ಅಜ್ಞಾತ,
ಅಪಹರಿಸಿ ಪ್ರಾತಃಕಾಲದ ಕುಂಕುಮವನ್ನು
ಮಂದಹಾಸವನ್ನು ಯಾವಾಗ ನನ್ನ ಪ್ರಭಾತವು
ಬೀರಿತೋ,
ಅಡಗಿಸಿ ಕೆಂಪು ವರ್ಣದಲ್ಲಿ ಸದ್ದಿಲ್ಲದೇ
ಸುವರ್ಣದ ಬಟ್ಟಲವನ್ನು ತಂದವನಾರು ?"

ಅವರ ಕವಿತೆಯಲ್ಲಿ 'ದುಃಖವಾದ'ದ ಪ್ರಭಾವವಿದೆ. ಈ ದುಃಖವಾದ, ಈ ವೇದನಾಪೂರ್ಣ ಸಂಸಾರವು ಅವರ

ಜೀವನದಲ್ಲಿ ಅನಾಯಾಸವಾಗಿ ನೆಲಿಸಿದೆ. ಆದ್ದರಿಂದಲೇ ಮಹಾದೇವಿಯವರು ವಿಶ್ವದ ಪ್ರತಿಯೊಂದು ಜೀವದಲ್ಲಿ ಕಣ-ಕಣದಲ್ಲಿ ಚೈತನ್ಯವನ್ನು ತುಂಬಿದಂಥ ಅಜ್ಞಾತ ಪ್ರಿಯತಮನ ಕೊಡುಗೆಯೆಂದು ಅತ್ಯಂತ ಪ್ರೀತಿವಿಶ್ವಾಸದಿಂದ ಹಾಗೂ ಆದರದಿಂದ ಈ 'ದುಃಖವಾದ' ವಾದವನ್ನು ಅನುಸರಿಸಿ ಕೊಂಡು ಬಂದಿದ್ದಾರೆ.

"ನಾನು ನನ್ನ ಈ ಶೂನ್ಯತೆಯ ನಿಶ್ಚಿಂತ
ಸಾಮ್ರಾಜ್ಞಿಯಾಗಿದ್ದೇನೆ.
ಪ್ರಾಣಜ್ಯೋತಿಯನು ಬೆಳಗಿಸಿ ದೀಪಾವಳಿಯನು
ಆಚರಿಸುತ್ತಿರುತ್ತೇನೆ."

ಎಂದೋ ಆ ಅಜ್ಞಾತ ಪ್ರಿಯತಮನೊಡನೆ ಮೂಕ ಮಿಲನವಾಗಿತ್ತೆಂದು ಭಾವಿಸಿ ಈ ನೀರವತೆಯ ದೀಪಾವಳಿಯನ್ನು ಆಚರಿಸುತ್ತಾರೆ ಮಹಾದೇವಿಯವರು. ಆದರೆ, ಇಂದು ಅದೆಲ್ಲವೂ ಸ್ವಪ್ನದ ಹಾಗೆ ಆಗಿದೆ. ಕ್ಷಿತಿಜದಿಂದ ದೂರಾಗಿದ್ದ ಹಾಗೂ ಮೂಕ ಮಿಲನದಿಂದುಂಟಾದ ವಿರಹ ದುಃಖದ ಸಾಮ್ರಾಜ್ಯದಲ್ಲಿಯೇ ಅವರು ಇರಬೇಕಾಗಿದೆ. ಅಲ್ಲಿ ಮಡಿಯುವದರಲ್ಲಿಯೇ 'ನಿರ್ವಾಣ' (ಮೋಕ್ಷ) ವುಂಟು. ನೀರವರೋದನವೇ ಅಲ್ಲಿಯ ಕಾವಲುಗಾರ—

"ಪೀಡೆಯ ಸಾಮ್ರಾಜ್ಯ ಸ್ಥಾಪನೆಯಾಯಿತು,
ಆ ದಿನ ಸುದೂರ ಆ ಕ್ಷಿತಿಜದ ಕಡೆಗೆ,
ಮಡಿಯುವದರಲ್ಲಿಯೇ ನಿರ್ವಾಣ ಅಲ್ಲಿ,
ನೀರವ ರೋದನವೇ ಕಾವಲುಗಾರ !

ಹೇಗೆ ಹೇಳುವಿ ಅದು ಕನಸೆಂದು,
ಸಖೀ ! ಆ ಮೂಕ ಮಿಲನದ ಪರಿಯನ್ನು ?
ತುಂಬಿವೆ ಇದುವರೆಗೆ ಹೂಗಳಲ್ಲಿ
ನನ್ನ ಅಶ್ರುಜಲ ಹಾಗೂ ಅವನ ನಗೆ."

ವೇದನೆಯನ್ನು ಪಡೆದಿರುವದರಿಂದಲೇ ಅವರ ಜೀವನದ ಲೌಕಿಕ ಸ್ವಪ್ನಗಳು ನಷ್ಟವಾಗಿವೆ.

"ಇರಲಿ ಬಿಡು ಹೇ ದೇವ !
ನನ್ನ ಈ ಅಳಿಯುವ ಅಧಿಕಾರ!"

ಅವರ ಕಾವ್ಯದಲ್ಲಿ ಹೇಗೆ ದುಃಖವಾದ ಹಾಗು ಪ್ರಿಯತಮರ (ಅಜ್ಞಾತ) ಪರಸ್ಪರ ಅಧ್ವೈತವಾಗಿವೆ ಎಂಬುದನ್ನು ಈ ಕೆಳಗಿನ ಪಂಕ್ತಿಗಳಲ್ಲಿ ನೋಡಬಹುದು—

"ನಿನ್ನನ್ನು ವೇದನೆಯಲ್ಲಿ ಅರಸಿದೆನು
ವೇದನೆಯೇ ನಿನ್ನನ್ನು ಅರಸುವದು."

ಈ ಸಂಗ್ರಹದಲ್ಲಿ ಸಂಗ್ರಹಿಸಲ್ಪಟ್ಟ ಗೀತಗಳಲ್ಲಿ ಈ ಕೆಳಗಿನ ಪಂಕ್ತಿಗಳು ಅತ್ಯಂತ ಸುಂದರ ಹಾಗೂ ಮಾರ್ಮಿಕ ವಷ್ಟೇ ಅಲ್ಲ ಮಹತ್ವಪೂರ್ಣವೂ ಆಗಿವೆ—

"ಹೇ ನೀಲಾಕಾಶದ ಜ್ಯೋತಿಗಳೇ
ನೀವು ಕ್ಷಣಮಾತ್ರ ಶಾಂತರಾಗಿರಿ,

ಅಂಧಃಕಾರದ ಪರದೆಯಲ್ಲಿ ಬರುವದು
ಕರುಣಾಮಯನಿಗೆ ಇಷ್ಟವಾದುದು"

ಇಲ್ಲಿ ಪ್ರೇಮದ ಪ್ರತೀಕವಾಗಿ, ಆತ್ಮ ಅಥವಾ ಪ್ರಾಣದ ಪ್ರತೀಕವಾಗಿ 'ದೀಪ' ಅಥವಾ 'ಜ್ಯೋತಿ'ಯನ್ನು ಪ್ರಯೋಗಿಸಿದ್ದುಂಟು. 'ನೀಹಾರ'ದಲ್ಲಿ ಶಬ್ದಗಳ ಲಾಕ್ಷಣಿಕ ಪ್ರಯೋಗ, ಅಮೂರ್ತ ವಸ್ತುಗಳಿಗಾಗಿ ಮೂರ್ತಯೋಜನೆ, ಭಾವಗಳ ಮತ್ತು ಪ್ರಾಕೃತಿಕರೂಪಗಳ ಮಾನವೀಕರಣ ಮುಂತಾದುವನ್ನು ಹೆಚ್ಚಿನ ಪ್ರಮಾಣದಲ್ಲಿ ಪ್ರಯೋಗಿಸಿದ್ದುದು ಈ ಸಂಕಲನದ ವೈಶಿಷ್ಟ್ಯವಾಗಿದೆ.

"ರಜನಿಯು ಹೊತ್ತುಕೊಂಡು ಹೊರಟಿತ್ತು,
ಥಳ-ಥಳಿಸುವ ತಾರೆಗಳ ಜಾಲ
ಅದರ ಹರಡಿದ ವೈಭವ ಕಂಡು,
ಪ್ರಕಾಶವು ರೋದಿಸುತ್ತಿರುವಾಗ,
ಶಶಿಯನ್ನು ಸ್ಪರ್ಶಿಸಲು ಮೀನಿನಂತೆ,
ತರಂಗಗಳನ್ನು ಚುಂಬಿಸಿ-ಚುಂಬಿಸಿ,
ಸುಧಿಯಿಲ್ಲದ ತಮದ ಛಾಯೆಯನ್ನು
ತಟವು ಆಲಂಗಿಸುತ್ತಿತ್ತು."

ಮೇಲಿನ 'ರಾತ್ರಿಯ ವರ್ಣನೆ'ಯು ಅತ್ಯಂತ ಮಾರ್ಮಿಕವಾಗಿದೆ ಹಾಗೂ ಅದರ ಕಾವ್ಯ ಸೌಂದರ್ಯವು ನಿಜಕ್ಕೂ ಅದ್ಭುತವಾಗಿದೆ.

## ೨) 'ರಶ್ಮಿ' (೧೯೨೮–೧೯೩೧)

ಮಹಾದೇವಿಯರ ದ್ವಿತೀಯ ಕೃತಿ 'ರಶ್ಮಿ'. ಇದು ಅಂತರ್ಮುಖ ಪ್ರಧಾನವಾಗಿದೆ. ಇಲ್ಲಿ ಮಹಾದೇವಿಯವರಿಗೆ ಅನುಭೂತಿಗಿಂತಲೂ 'ಚಿಂತನೆ' ಅತ್ಯಂತ ಪ್ರಿಯವಾಗಿದೆ. 'ನೀಹಾರ'ದಲ್ಲಿಯ ಅಸ್ಪಷ್ಟತೆ 'ರಶ್ಮಿ'ಯಲ್ಲಿ ಕೊನೆಗೊಳ್ಳುತ್ತಲಿದೆ. ಭಾವಭೂಮಿಯ ದೃಷ್ಟಿಯಿಂದ ನೋಡಿದರೆ ಇಲ್ಲಿ ಅವರ ಪ್ರಥಮ ಕೃತಿ 'ನೀಹಾರ'ದಲ್ಲಿ ವ್ಯಕ್ತವಾದ ಜಿಜ್ಞಾಸೆ, ಕುತೂಹಲವುಂಟು. ಆದರೆ, ಚಿಂತನೆಯು ಅವರನ್ನು ತತ್ವಜ್ಞಾನದ ಕಡೆಗೆ ಒಯ್ದಾಗ ಸ್ವಲ್ಪ ಸಮಾಧಾನವಾಗುತ್ತದೆ. ಮತ್ತು ರಹಸ್ಯಾನುಭೂತಿಯಲ್ಲಿ ಸ್ಪಷ್ಟತೆ ಕಾಣುತ್ತದೆ. ಇಲ್ಲಿ ಆಧ್ಯಾತ್ಮಿಕ ತತ್ವಗಳ ಬಗ್ಗೆ ಕುತೂಹಲ ಅಥವಾ ಜಿಜ್ಞಾಸೆಯುಂಟಾಗುತ್ತಿದ್ದದ್ದು ಗೋಚರವಾಗುತ್ತದೆ.

'ರಶ್ಮಿ'ಯಲ್ಲಿ ಒಂದು ಬಗೆಯ ಆಹ್ಲಾದವುಂಟು, ವೇದನೆಯ ಮಾಧುರ್ಯವುಂಟು. ಪ್ರಿಯ ವಸ್ತುಗಳ ಸ್ಥಿರತೆಯ ಬಯಕೆಯುಂಟು, ಶಾಶ್ವತ ಮೌಲ್ಯಗಳಾದ–ಜೀವನ, ಮೃತ್ಯು, ಮುಕ್ತಿ, ಅಮರತ್ವ ಮತ್ತು ಪ್ರಕೃತಿ ಹಾಗೂ ಆಧಾರಗಳ ಬಗ್ಗೆ ಲವಲವಿಕೆಯುಂಟು. ಕಾವ್ಯದ ಭಿನ್ನ–ಭಿನ್ನ ಸ್ವರಗಳಲ್ಲಿ ಐಕ್ಯತೆ ಹಾಗೂ ವಿರೋಧೀ ವಿಷಯಗಳಲ್ಲಿಯೂ ಸಹ ಸಾಮಂಜಸ್ಯವುಂಟಾಗಿದೆ. ಇಲ್ಲಿ ವಿರಹವರ್ಣದ ಆಧ್ಯಾತ್ಮೀಕರಣವೂ ಸಹ ಪ್ರಾರಂಭವಾಗಿದೆ

ಮತ್ತು ಅದು ಸ್ವಚ್ಛಂದ ಭಾವಪ್ರವಾಹದಲ್ಲಿ ಬಾಧಕವೂ ಆಗಿದೆ. ಈ ಕೃತಿಯಲ್ಲಿ ಪ್ರಕೃತಿಯ ರೂಪಗಳಲ್ಲಿ ಯಾವದೋ 'ಅಜ್ಞಾತ'ದ ಆಭಾಸವೂ ಕಂಡು ಬರುತ್ತದೆ.

'ರಶ್ಮಿ'ಯಲ್ಲಿ ಕಾವ್ಯಕಲೆಯ ವಿಕಾಸವಾಗಿದ್ದರೂ ಕೂಡ ಸೌಷ್ಠವತೆ ಇನ್ನೂ ಸುಸ್ಪಷ್ಟವಾಗಿ ಕಂಡು ಬರುವದಿಲ್ಲ. ಭಾವಾಭಿವ್ಯಂಜನೆಗೆ ಪೂರ್ಣತೆ ಪ್ರಾಪ್ತವಾಗಿಲ್ಲ. ಭಾವನೆಗಳ ಶಬ್ದಚಿತ್ರಗಳನ್ನು ಚೆನ್ನಾಗಿ ಅರ್ಥವತ್ತಾಗಿ ಚಿತ್ರಿಸುವ ಶಕ್ತಿ 'ರಶ್ಮಿ'ಯ ಗೀತಗಳಲ್ಲಿ ಬಂದಿಲ್ಲ. ಶಬ್ದಜೋಡಣೆಗಳಲ್ಲಿ ಕೆಲವೊಂದುಮಟ್ಟಿಗೆ ಸೌಷ್ಠವತೆ ಕಂಡು ಬರುತ್ತದಷ್ಟೇ ಅಲ್ಲ ಆ ಗೀತಗಳ ಭಾಷೆಯಲ್ಲಿ ಒಂದು ಪ್ರಕಾರದ ವಿಕಾಸವೂ ಸಹ ಕಂಡುಬರುತ್ತದೆ. ಇಲ್ಲಿ ಕಲ್ಪನಾಬಾಹುಲ್ಯವುಂಟು.

'ರಶ್ಮಿ'ಯ ಗೀತಗಳಲ್ಲಿ ದುಃಖವು ಪತಂಗದಂತೆ ಉರಿದೇಳುತ್ತದೆ. ದುಃಖದ ಅಭಿವ್ಯಕ್ತಿಯಲ್ಲಿ ಒಂದು ಬಗೆಯ ಅಧೀರತೆ, ಆತುರತೆ, ಹಾಗೂ ಅಸ್ಥಿರತೆಯುಂಟು-

"ಮೃಗ ಮರೀಚಿಕೆಯಚಿರ ಪಥದ ಮೇಲೆ,
ಸುಖವು ಬರುತ್ತಿತ್ತು ತೃಷೆಯ ಹೆಜ್ಜೆ ಇಡುತ್ತಾ,
ರುದ್ಧ ಹೃದಯದ ಪಟ ಕೈಯಲ್ಲಿ ಹಿಡಿದು."

'ರಶ್ಮಿ'ಯ ಪ್ರಥಮ ಗೀತದಲ್ಲಿ ಸುಂದರವಾದ ಉಷಃಕಾಲದ ಅದ್ಭುತವಾದ ರಸಮಯ ಚಿತ್ರಣವುಂಟು-

"ನಿನ್ನ ಗುಲಾಬಿ ವರ್ಣದ ಬಾಣವು ಭೇದಿಸುತ್ತಲೇ
ಕಣ-ಕಣದಿಂದ ಹೊರಸೂಸುತ್ತದೆ
ಮೃದು ಸ್ರೋತದಿಂದ ಸಜಲಗಾನ!"

ಸಾಯಂಕಾಲದ ವರ್ಣನೆಯು ಚಿತ್ರಗಳೂ ಕೂಡ ಈ ಸಂಗ್ರಹದಲ್ಲಿ ಅಪ್ರತಿಮವಾಗಿವೆ. ಇಲ್ಲಿ 'ಸಾಯಂಕಾಲ'ದ ವರ್ಣನೆಯು ದಣಿವುರಹಿತ ಸೌಂದರ್ಯದ ಸೃಜನೆ ಹಾಗೂ ವಿನಾಶದ ಸೂಚಕ ಅಥವಾ ಸಂಕೇತವಾಗಿದೆ. ಪ್ರಾತಃಕಾಲ ದಿಂದ ಸಾಯಂಕಾಲದವರೆಗೆ ಬದಲಾಗುತ್ತಿರುವ ಅವಕಾಶದ ರೂಪ-ರಂಗಗಳುಳ್ಳ ರಾತ್ರಿಯ ಅಂಧಃಕಾರವು ಹಬ್ಬಿದೊಡನೆ ಸಾಯಂಕಾಲವು ತನ್ನ ರೂಪಾಕರ್ಷಣದಲ್ಲಿ ಇನ್ನೂ ಮೋಹಕ ವಾಗಿ ಕಂಗೊಳಿಸುತ್ತದೆ–

"ಗುಲಾಲಿನಿಂದ ರವಿಯ ಪಥದಲ್ಲಿ ರಂಗವಲ್ಲಿ ಹಾಕಿ,
ಪಶ್ಚಿಮ ದಿಶೆಯಲ್ಲಿ ಪ್ರಥಮ ಜ್ಯೋತಿಯನು ಹಚ್ಚಿ,
ಸಂಧ್ಯಾಕಾಲವು ಸೌಭಾಗ್ಯದಿಂದ ತುಂಬಿಕೊಂಡು
ನಸು ನಗುತ್ತದೆ,
ನೇತ್ರಗಳಿಂದ ಸುವರ್ಣ ಪರಾಗವು ಉದುರುತ್ತದೆ,
ಅದನ್ನು ಅಂಧಃಕಾರದ ಒಂದು ಹೊಡೆತವು
ಹಾರಿಸಿಕೊಂಡು ಯಾವ ದಿಶೆಗೆ ಕರೆದೊಯ್ಯುತ್ತದೆ?
ದಣಿವುರಹಿತ ಸೌಂದರ್ಯದ ಸೃಷ್ಟಿ-ಲಯ
ಇದೇ ಏನು ಜಗತ್ತಿನ ಶ್ವಾಸೋಚ್ಛ್ವಾಸ?"

‘ರಶ್ಮಿ’ಯಲ್ಲಿ ‘ಉಪಮೆ’ಗಳ ಬಹುಸುಂದರವಾದ, ಪ್ರಭಾವಪೂರ್ಣವಾದ ಪ್ರಯೋಗಗಳನ್ನು ಮಾಡಿದ್ದು ಕಂಡು ಬರುತ್ತದೆ. ಕೆಲವು ಉತ್ತಮ ಉದಾಹರಣೆಗಳನ್ನು ಇಲ್ಲಿ ನೋಡಬಹುದು—

“ನವ ಮೇಘಗಳಿಗಾಗಿ ರೋದಿಸುತ್ತಿದ್ದಾಗ
ಚಾತಕದ ಶಿಶು ಮನಸ್ಸು
ನನ್ನ ಮನವೆಂಬ ಬಾಲಶಿಖಿಯಲ್ಲಿ,
ಮಧುರ ಸಂಗೀತ ಸೃಜನವಾಗುತ್ತಿತ್ತು.”
“ವಿಹಗ ಶಾವಕದಂತೆ ಯಾವದಿನ
ಮೂಕವಾಗಿಬಿದ್ದಿತ್ತು ಸ್ವಪ್ನಗೂಡಿನಲ್ಲಿ ಪ್ರಾಣ.”
ಕವಯಿತ್ರಿಯ ರಹಸ್ಯವಾದಕ್ಕೆ ಒಂದು ನಿದರ್ಶನ—
“ಸಜನೀ, ಯಾವನು ಅಂಧಃಕಾರದಲ್ಲಿ ಪರಿಚಿತನಂತೆ,
ಜಾಗೃತಿಯೆಂತೆ, ಛಾಯೆಯಂತೆ ಬರುತ್ತಾನೆ ? ”

ಕೊನೆಗೆ ಕವಯಿತ್ರಿಯು ಸುಖ-ದುಃಖಗಳ ಜಲ ಬಿಂದುಗಳಲ್ಲಿ ತನ್ನ ಸಿಪ್ಪಲವಾದ ಸ್ವಪ್ನಗಳನ್ನು ಕೂಡಿಸಿ ಎಂದಾದರೂ ಆ ಅಜ್ಞಾತ ಪ್ರಿಯತಮನ ಸಸ್ಮಿತ ಅಧರ ಗಳನ್ನು ಮುಟ್ಟಿ ಸುಖ-ದುಃಖಗಳು ಸಾರ್ಥಕವಾಗುತ್ತವೆಂಬ ಪ್ರಬಲವಾದ ಅಭಿಲಾಷೆಯುಳ್ಳವರಾಗಿದ್ದಾರೆ.

ಪ್ರಸ್ತುತ ಕಾವ್ಯದಲ್ಲಿ ಆ ‘ಅನಂತ ಸೌಂದರ್ಯ ನಿಧಿ’ ಯ ವರ್ಣನೆ ಇರುವದರಿಂದ ಹೆಜ್ಜೆ-ಹೆಜ್ಜೆಗೆ ‘ವ್ಯತಿರೇಕ’

ಹಾಗೂ 'ಪ್ರತೀಪ' ಅಲಂಕಾರಗಳು ಕಂಡುಬರುತ್ತವೆ. ಇಲ್ಲಿ ಕೆಳಗಿನ ಪಂಕ್ತಿಗಳಲ್ಲಿ 'ನಖ' ಮತ್ತು 'ಚರಣ'ಗಳ ಸೌಂದರ್ಯವನ್ನು ನೋಡಿರಿ—

"ಅವನ ಚರಣಗಳ ಮೇಲೆ ದೇವತೆಗಳು ತಮ್ಮ
ಅಮರ ಲೋಕವನ್ನು ತ್ಯಜಿಸುತ್ತಿದ್ದರು,
ನಖ-ಚಂದ್ರನ ಕಾಂತಿಯನು ಕಂಡು
ನಕ್ಷತ್ರಗಳು ನಾಚಿಕೆ ಪಡುತ್ತಿದ್ದವು."

ಇಲ್ಲಿ ಕಾವ್ಯ ಸೌಂದರ್ಯವು ಅಪ್ರತಿಮವಾಗಿದೆ. ನಖ ಜ್ಯೋತಿಯಲ್ಲಿ ರತ್ನಜಾಲಕ್ಕಿಂತಲೂ ಅತ್ಯಧಿಕ ಸೌಂದರ್ಯ ವಿದ್ದುದರಿಂದ ಪ್ರಸ್ತುತ (ಉಪಮೇಯ)ದಿಂದ ಅಪ್ರಸ್ತುತ (ಉಪಮಾನ)ವು ಲಜ್ಜಿಗೀಡಾಗಿದ್ದುದು 'ಪ್ರತೀಪ ಅಲಂಕಾರ' ವಾಗಿದೆ.

ಮತ್ತೊಂದೆಡೆಗೆ 'ಭೂತ' ಮತ್ತು 'ಭವಿಷ್ಯ'ದ ಸ್ವರೂಪವನ್ನು ಉಪಮಾನಗಳ ಮುಖಾಂತರ ತೋರಿಸ ಲ್ಪಟ್ಟಿದೆ—

"ಮಂಜಿನಂತೆ ಅಸ್ಪಷ್ಟ ಭವಿಷ್ಯ
ಅತೀತ ಪ್ರಿಯವಾದ ಅಂಧಃಕಾರದಂತಿದೆ."

ಇಂದಿನ ಆಧುನಿಕ ಕವಿಗಳಂತೆ ಮಹಾದೇವಿ ವರ್ಮಾ ಅವರು ಅಪ್ರಸ್ತುತ (ಉಪಮಾನ)ಗಳನ್ನು ಬೇರೆ ಸಾಹಿತಿ

ಗಳಿಂದ ಪಡೆದಿದ್ದರೂ ಸಹ ಅವರ ಮೌಲಿಕ ಅಪ್ರಸ್ತುತಗಳು ಬಹಳೇ ಅದ್ಭುತವಾಗಿವೆ, ಅತ್ಯಂತ ಮನೋಹರವಾಗಿವೆ. ಉದಾಹರಣಾರ್ಥವಾಗಿ ಕೆಳಗಿನ ಪಂಕ್ತಿಗಳನ್ನು ಉಲ್ಲೇಖಿಸ ಬಹುದು—

"ಅವನಿ ಆಗಸದ ರೂಪವಂತ ಸಿಂಪಿನಲ್ಲಿ
ತರಲ ಮುತ್ತಿನಂತೆ ಸಾಗರವು ಕಂಪಿಸಿದಾಗ
ತೇಲುವವು ಮೋಡಗಳು ಮೃದುಲ ಹಿಮರಾಶಿಯಂತೆ
ಜ್ಯೋತ್ಸ್ನೆಯ ರಜತ ಸಾಗರದಲ್ಲಿ."

ಪ್ರಸ್ತುತ ಹಾಗು ಅಪ್ರಸ್ತುತದ ಮತ್ತೊಂದು ಮೌಲಿಕ (Original) ಉದಾಹರಣೆಯನ್ನು ನೋಡಬಹುದು—

"ನೀನು ಪ್ರಭಾತದ ಕಟಾಕ್ಷನಾಗಿರುತ್ತೀ
ನಾನು ವಿಧುರ ರಾತ್ರಿಯಾಗುವೆ
ವಿಯೋಗ ಕಾಲವನು ಅತ್ತು ಕಳೆಯುವೆ
ಸಂಯೋಗ ಸಮಯಕ್ಕೆ ಅಡಗುವೆ."

ಈ ಪ್ರಕಾರವಾಗಿ 'ರಶ್ಮಿ'ಯು ಪ್ರಾರಂಭಿಕ ಕೃತಿಗಳೊಲ್ಲೊಂದಾದರೂ ಉತ್ತಮ ಕೃತಿಯಾಗಿದೆ.

೩) **'ನೀರಜಾ' (೧೯೩೧-೩೪)**

'ನೀರಜಾ' ಶ್ರೀಮತಿ ಮಹಾದೇವಿ ವರ್ಮಾ ಅವರ ಅನುಭೂತಿ ಮತ್ತು ಚಿಂತನಪ್ರಧಾನವಾದ ಜಲ ಗೀತಗಳ

ಸಂಕಲನ. ಮಹಾದೇವಿಯವರ ಕಾವ್ಯವನ್ನು ಪ್ರತಿನಿಧಿಸುವ ಸಾಮರ್ಥ್ಯವುಳ್ಳದ್ದಾಗಿದೆ ಈ ಕೃತಿ. ಕಾವ್ಯಾಂಗಗಳ ದೃಷ್ಟಿಯಿಂದ ಇದು 'ಮುಕ್ತಕ ಗೀತಕಾವ್ಯ'ದ ಶ್ರೇಣಿಯಲ್ಲಿ ಬರುತ್ತದೆ. ಆತ್ಮ ಸಾಕ್ಷಾತ್ಕಾರದ ಆನಂದವನ್ನು ಪಡೆದು ಯಾವ ಪ್ರಕಾರ ಸಾಧಕನು ತೃಪ್ತಿಪಡೆಯುತ್ತಾನೆಯೋ ಅದೇ ಪ್ರಕಾರದ ಪರಿತೃಪ್ತಿಭಾವವು 'ನೀರಜಾ'ದ ಅನೇಕ ಗೀತಗಳಲ್ಲಿ ವ್ಯಕ್ತವಾಗಿವೆ. 'ನೀಹಾರ'ದಿಂದ 'ರಶ್ಮಿ'ಯ ವರೆಗೆ ಕಲ್ಪನೆಯ ಪ್ರಾಧಾನ್ಯವು ಕಂಡುಬರುತ್ತದೆ. ಆದರೆ, 'ನೀರಜಾ'ದ ಗೀತಗಳಲ್ಲಿ ಈ ಮೊದಲೇ ಉಲ್ಲೇಖಿಸಿದಂತೆ ಚಿಂತನೆ ಹಾಗು ಅನುಭೂತಿ ಪ್ರಧಾನವಾಗಿವೆ. ಇಲ್ಲಿ ಕಾವ್ಯಾನಂದದೊಡನೆ ಒಂದು ಪ್ರಕಾರದ ನೈಸರ್ಗಿಕ ರಸಾನುಭೂತಿಯು ಪ್ರಾಪ್ತವಾಗುತ್ತದೆ. ಕಾವ್ಯಶೈಲಿಯ ಕ್ರಮಿಕ ವಿಕಾಸವೂ ಕಂಡು ಬರುತ್ತದೆ.

'ನೀರಜಾ'ದಲ್ಲಿ ಚಿಂತನೆ ಮತ್ತು ಅನುಭೂತಿ, ಗೀತ ಹಾಗು ಸಂಗೀತಗಳ ಸಮನ್ವಯಯುಂಟಾಗಿದೆ. ಇವರಲ್ಲಿ ಕವಯಿತ್ರಿಯ ಅಂತರ್ದರ್ಶನ ಮತ್ತು ಆತ್ಮನಿಷ್ಠತೆಯು ಅತ್ಯಂತ ಪ್ರಧಾನವಾಗಿ ಮೂಡಿಬಂದಿವೆ.

ಇದು ಮಹಾದೇವಿಯವರ ಕಾವ್ಯಾನುಭೂತಿಯ ತೃತೀಯ ಸೋಪಾನವು. ಮತ್ತು ಈ ಸೋಪಾನದ ವರೆಗೆ ತಲುಪುತ್ತಲೇ ಅವರ ಅಂತಿಮ ಧ್ಯೇಯಗಳ ಮನೋಹರವಾದ ಹಾಗು ವೈಭವಪೂರ್ಣ-ಶಿಖರಗಳು ಕಾಣಿಸುತ್ತವೆ. ಈ

ಕೃತಿಯು ಸ್ವಚ್ಛಂದತಾವಾದದ ಪ್ರಮುಖ ಪ್ರವೃತ್ತಿಗಳಾದ 'ಛಾಯಾವಾದ' ಮತ್ತು 'ರಹಸ್ಯವಾದ'ವನ್ನು ಪ್ರತಿನಿಧಿಸುತ್ತದೆ. ಕಲಾಪಕ್ಷದ ದೃಷ್ಟಿಯಿಂದ ಅದು ಅಂಶತಃ 'ಛಾಯಾವಾದೀ' ಮತ್ತು ಭಾವಪಕ್ಷದ ದೃಷ್ಟಿಯಿಂದ 'ರಹಸ್ಯವಾದೀ'ಕಾವ್ಯವಾಗಿದೆ. 'ನೀಹಾರ'ದ ಭಾವಾಕುಲತೆ ಮತ್ತು 'ರಶ್ಮಿ'ಯ ತತ್ವಜ್ಞಾನದ ನಂತರ 'ನೀರಜಾ'ದಲ್ಲಿ ಒಂದು ಪ್ರಕಾರದ ತೃಪ್ತಿಯ ಭಾವನೆಯುಂಟಾಗಿದ್ದುದು ಕಂಡುಬರುತ್ತದೆ.

'ನೀರಜಾ'ದಲ್ಲಿ ವರ್ಮಾ ಆತ್ಮಾನಂದದ ಮಧುರ-ಮಧುರವಾದ ಸಂಗೀತವುಂಟು. ಉದಾಹರಣಾರ್ಥ—

"ನೀನು ಪವಡಿಸು ನಾನು ಹಾಡುವೆ !
ನಾನು ನಿದ್ರಿಸುತ್ತಾ ಯುಗ-ಯುಗಗಳು ಕಳೆದವು,
ನಿನಗೆ ಜೋಗುಳ ಹಾಡುತ್ತಾ;
ಈಗ ಬಾ ನಾನು ರೆಪ್ಪೆಗಳಲ್ಲಿ
ಸ್ವಪ್ನಗಳ ಹಾಸಿಗೆ ಹಾಸುವೆ

ಇದೇ ಪ್ರಕಾರವಾಗಿ—

೧) "ಹೊಸ ಮೋಡವೇ ಯಾವಸಂದೇಶವನ್ನು
ತಂದಿರುವಿ ! "

೨) "ಜಗ ಕರುಣಾಮಯ, ಕರುಣಾಮಯ,
ನಾನು ಮಧುರ-ಮಧುರ."

'ನೀರಜಾ'ದಲ್ಲಿ ವಿರಹವ್ಯಥೆ ತೀವ್ರವಾಗಿದೆ ಮತ್ತು ಈ ಭಾವಗಳಿಗೆ ತತ್ವಜ್ಞಾನ ಹಾಗು ಚಿಂತನೆಯ ಪೃಷ್ಠಭೂಮಿಯಿದೆ.

"ವೀಣೆಯೂ ಆಗಿದ್ದೇನೆ ನಾನು ನಿನ್ನರಾಗವೂ ಸಹ."

'ನೀರಜಾ'ದ ಕವಿತೆಗಳಲ್ಲಿ 'ನೀಹಾರ' ಮತ್ತು 'ರಶ್ಮಿ'ಗಿಂತಲೂ ಅತ್ಯಧಿಕ ವಿಕಾಸ, ಸೌಷ್ಠವ, ಕಲಾತ್ಮಕತೆ ಹಾಗು ಪರಿಪಕ್ವತೆಯುಂಟು. ಇದರಲ್ಲಿ ಅನುಭೂತಿ ಪ್ರಧಾನ ಗೀತಗಳೇ ಹೆಚ್ಚು ಮತ್ತು ಅವುಗಳಲ್ಲಿ ಕಾವ್ಯತ್ವದ ನಿರ್ಮಲವಾದ ವೈಭವವುಂಟು. 'ಗೀತಿಕಾವ್ಯ'ದಂತಿದ್ದರೂ ಇದರ ಗೀತಗಳಲ್ಲಿ ವಿವಿಧತೆಯ ಅಭಾವವುಂಟು ಎಂದು ಒಬ್ಬ ವಿಮರ್ಶಕರ ಅಭಿಪ್ರಾಯ. ಆದರೆ 'ಅಹಂ'ವು ಅತ್ಯಂತ ನಿಷ್ಠವೂ ಮತ್ತು ತೀವ್ರವೂ ಆಗಿದೆ. ಈ ಗೀತಗಳ ಕಲೆಯಲ್ಲಿ ತತ್ವಜ್ಞಾನದ ಆಧಾರಗಳನ್ನು ದಹನಮಾಡುವಂಥ ಶಕ್ತಿಯುಂಟು. ಇಲ್ಲಿ ಅವರ ಗೀತಪರಂಪರೆ ಪೂರ್ಣತೆಯನ್ನು ಪಡೆಯುತ್ತದೆ. ಇಲ್ಲಿ ಭಾಷೆ ಮತ್ತು ಭಾವದಲ್ಲಿ, ಅನುಭೂತಿ ಮತ್ತು ಅಭಿವ್ಯಕ್ತಿಯಲ್ಲಿ ತಾರತಮ್ಯವುಂಟು.

'ನೀರಜಾ'ದಲ್ಲಿ ವಿರಹದೆಶೆಯ ವರ್ಣನೆಯು ಬಹಳೇ ಶ್ಲಾಘ್ಯವೂ ಹಾಗೂ ಮನೋಹರವಾಗಿರುತ್ತದೆ. ಪ್ರಿಯತಮನ ವಿರಹದಿಂದಲೂ ಸಹ ಜೀವನದ ಸಾರ್ಥಕತೆಯು ಅನುಭವವಾಗಬಲ್ಲದು. "ಜೀವನವು ವಿರಹವ ಜಲಜಾತ"

ಎಂದು ಹೇಳುತ್ತಾ 'ನೀರಜಾ'ದ ವಿರಹಜನ್ಯ ಉಪಾದಾನ ಗಳಿಂದಲೇ ನಿರ್ಮಾಣದ ವಿವರವನ್ನು ಪ್ರಸ್ತುತಪಡಿಸ ಲಾಗಿದೆ–

"ವಿರಹದ ಜಲಜಾತ ಜೀವನ, ವಿರಹದ ಜಲಜಾತ !
ವೇದನೆಯಲ್ಲಿ ಜನ್ಮ ಕರುಣೆಯಲ್ಲಿ ಆವಾಸ,
ಅಶ್ರುದಿವಸವನ್ನು ಎಣಿಸುತ್ತದೆ ರಾತ್ರಿಯು
ಅಶ್ರುವನ್ನು ಎಣಿಸುತ್ತದೆ.
ಜೀವನ ವಿರಹದ ಜಲಜಾತ !
ಅಶ್ರುಗಳ ಕೋಶ ಹೃದಯ, ದೃಗ ಅಶ್ರುಗಳ
ಟಂಕಶಾಲೆ,
ತರಲ ಜಲಕಣಜನಿತ ಮೇಘದಂಥಾ ಕ್ಷಣಿಕ ಶರೀರ,
ಜೀವನ ವಿರಹದ ಜಲಜಾತ ! "

ಪ್ರಿಯತಮನ ಅನುಭೂತಿಯ ವರ್ಣನೆಗಳು ಅದ್ವೈತ ಭಾವನೆಯೊಂದಿಗೆ ಈ ಸಂಕಲನದಲ್ಲಿ ಅಲ್ಲಲ್ಲಿ ಕಂಡು ಬರುತ್ತವೆ.

"ಪ್ರಿಯನೇ ! ನೀನು ನನ್ನೊಳಗೆ, ಮತ್ತೆ
ಪರಿಚಯವೇತಕೆ !
ತಾರೆಯಲ್ಲಿ ಕಾಂತಿ, ಪ್ರಾಣದಲ್ಲಿ ಸ್ಮೃತಿ,
ರೆಪ್ಪೆಗಳಲ್ಲಿ ನೀರವ ಪಾದದ ಗತಿ,
ಲಘು ಉರದಲ್ಲಿ ನಿನ್ನ ಪುಲಕಗಳ ಚಂಚಲ ಸಂಸ್ಕೃತಿ
ತುಂಬಿ ತಂದಿದ್ದೇನೆ,
ಮತ್ತೆ ಜಗದೊಳಗೇನು ಸಂಗ್ರಹಿಸಲಿ

ನೀನು ನನ್ನೊಳಗನೆ ಪ್ರಿಯಾ ! ಮತ್ತೆ
ಪರಿಚಯವೇತಕೆ ! "

ತಮ್ಮ ರಹಸ್ಯಾನುಭೂತಿಗಳನ್ನು ಲೌಕಿಕ ರೂಪಕಗಳ ಮುಖಾಂತರ ವ್ಯಕ್ತ ಮಾಡುವವರಲ್ಲಿ ಮಹಾದೇವಿಯವರಿಗೆ ತುಂಬ ಸಫಲತೆ ದೊರಕಿದೆ. 'ನೀರಜಾ'ದ ಗೀತಗಳಲ್ಲಿ ಈ ಲೌಕಿಕ ರೂಪಕಗಳ ಪ್ರಯೋಗವು ಅದ್ಭುತವಾಗಿದೆ. ಕವಯಿತ್ರಿ ಮಹಾದೇವಿಯವರು ತನು-ಮನವನ್ನು ಮರೆತು ಅಂತರಂಗದ ಹರ್ಷಾತಿರೇಕದಲ್ಲಿ ಗೀತ ರಚಿಸುವಾಗಂತೂ ಈ ರೂಪಕಗಳ ಸೌಂದರ್ಯವು ವರ್ಣನಾತೀತವಾದದ್ದು. ಹೃದಯದ ಪ್ರಾಮಾಣಿಕ ಅನುಭೂತಿಯನ್ನು ಚಿತ್ರಿಸುವಾಗ ಹಾಗೂ ತಲ್ಲೀನರಾಗಿ ಹಾಡುವಾಗ ಅದರಲ್ಲಿ ಕೃತ್ರಿಮತೆಯಾಗಲೀ ಅಸ್ಪಷ್ಟತೆಯಾಗಲೀ ಎಳ್ಳಷ್ಟೂ ಕಂಡು ಬರುವದಿಲ್ಲ. ಈ ಕೆಳಗಿನ ಗೀತದಲ್ಲಿ ಸ್ವಾಭಾವಿಕವಾದ ಸರಲ ಭಾವದ ಸ್ನಿಗ್ಧ ಅಭಿವ್ಯಕ್ತಿಯನ್ನು ನೋಡಿ ಮಹಾದೇವಿಯವರ ಕಾವ್ಯಕಲೆಯು ಎಷ್ಟೊಂದು ಅಮೂಲ್ಯವಾದುದೆಂಬುದನ್ನು ಕಂಡುಕೊಳ್ಳಬಹುದು–

"ವೀಣೆಯೂನಾನೇ ನಿನ್ನ ರಾಗಿಣಿಯೂನಾನೇ !
.... ... .... .... ...
ಅಧರವೂ ಆಗಿದ್ದೇನೆ ಮತ್ತು ಸ್ಮಿತದ
ಬೆಳದಿಂಗಳೂ ಆಗಿದ್ದೇನೆ,
ವೀಣೆಯೂ ನಾನೇ ನಿನ್ನ ರಾಗಿಣಿಯೂ ನಾನೇ !

'ನೀರಜಾ'ದ ಗೀತಗಳಲ್ಲಿ ವ್ಯಕ್ತವಾದ 'ದುಃಖವಾದ'ವು ಲೌಕಿಕ ಸೀಮೆಗಳನ್ನು ದಾಟಿ ಅಲೌಕಿಕ ಆನಂದದ ಪಥವನ್ನು ಪ್ರಶಸ್ತಗೊಳಿಸುತ್ತದೆ–

"ನೀನು ದುಃಖವಾಗಿ ಈ ಮಾರ್ಗದಿಂದ ಬರಬೇಕು !
.. .. .. .. ..
ಇವರ ವಿಭೂತಿಯಲ್ಲಿ ಮತ್ತೆ ಬಂದು ನಿನ್ನ
ಪದಚಿಹ್ನೆಯನ್ನು ಮಾಡಿಸಿ ಹೋಗು,
ನೀನು ದುಃಖವಾಗಿ ಈ ಮಾರ್ಗದಿಂದ ಬರಬೇಕು."

ದುಃಖದಲ್ಲಿ ತಮ್ಮ ಅಸ್ತಿತ್ವವನ್ನು ಮುಳುಗಿಸಿ ಆತ್ಮಾನಂದ ಲಾಭವನ್ನು ಪಡೆಯುವವರಲ್ಲಿಯೇ ಜೀವನದ ಸಾರ್ಥಕತೆಯುಂಟು. "ನಶ್ವರರ ನಿಶ್ಚಿಂತವಾದ ರಾಸಕ್ರೀಡೆಗಳೇ" ವಿಶ್ವದಲ್ಲಿ ಸೌರಭ, ರಾಗ, ಆಲೋಕ ಮತ್ತು ಹಾಸ್ಯರಸದ ಸೃಷ್ಟಿಯನ್ನು ಮಾಡುತ್ತವೆ. ಇದೇ ಭಾವದ ಸುಂದರತಮವಾದ ಭಾವಾಭಿವ್ಯಕ್ತಿಯನ್ನು ಕೆಳಗಿನ ಗೀತದಲ್ಲಿ ನೋಡಬಹುದು.

"ನನ್ನ ನಗುತ್ತಿರುವ ಅಧರಗಳಲ್ಲಿ ಜಗದ
ಅಶ್ರುಲಡಿಗಳನ್ನು ನೋಡು,
ನನ್ನ ಆರ್ದ್ರ ರೆಪ್ಪೆಗಳನ್ನು ಸ್ಪರ್ಶಿಸಬೇಡ ಬಾಡಿದ
ಮೊಗ್ಗುಗಳನ್ನು ನೋಡು."

'ನೀರಜಾ'ದಲ್ಲಿ ಮಹಾದೇವಿಯವರ ಚಿಂತನೆಯ ದಿಶೆಯಲ್ಲಿ ಉಲ್ಲೇಖನೀಯ ಪರಿವರ್ತನೆ ಅವಶ್ಯವಾಗಿ ಆಗಿದೆ. 'ಆತ್ಮ' ಮತ್ತು 'ಪರಮಾತ್ಮ'ದ ಅಸ್ತಿತ್ವದೊಡನೆ ಇದರಲ್ಲಿ ಪ್ರಕೃತಿ ಅಥವಾ ವಿಶ್ವದ ಅಸ್ತಿತ್ವವೂ ಸಹ ರಾಗಾತ್ಮಕ ಸಂಬಂಧ ಸ್ಥಾಪಿಸುತ್ತಿರುವಂತೆ ಗೋಚರವಾಗುತ್ತದೆ.

'ನೀರಜಾ'ದ ಮೂಲ ಭಾವನೆಯ ಯಥಾರ್ಥ ಪರಿಚಯ ಮಾಡಿಕೊಡುವ ಅವರ "ಮಧುರ-ಮಧುರ ನನ್ನ ದೀಪವೇ ಉರಿ"— ಎಂಬ ಕವಿತೆ. ಈ ಕವಿತೆಯಲ್ಲಿ 'ದೀಪ'ವು ಕವಯಿತ್ರಿಯ ವ್ಯಕ್ತಿತ್ವದ ಪ್ರತೀಕವಾಗಿರುತ್ತದೆ. ತಮ್ಮ ಸುಕುಮಾರ, ಕೋಮಲ ಶರೀರವನ್ನು, ತಮ್ಮ ಜೀವನದ ಪ್ರತಿಯೊಂದು ಅಣು-ಅಣುವನ್ನು 'ದೀಪ'ದಂತೆ ಉರಿಸುತ್ತಾ ಕವಯಿತ್ರಿಯು ಪ್ರಿಯತಮನ ಪಥವನ್ನು ಪ್ರಕಾಶಿತಗೊಳಿಸಬೇಕೆಂದು ಅಪೇಕ್ಷಿಸುತ್ತಾಳೆ. ತನ್ನನ್ನು ತಾನೇ ಮೇಣದಂತೆ ಕರಗಿಸಿ ಪ್ರಕಾಶವನ್ನು ಬೆಳಗುವ ದೀಪಶಿಖೆ (ದೀಪಜ್ವಾಲೆ) ಯಲ್ಲಿ ವಿಶ್ವಕಲ್ಯಾಣ, ಜಗತ್ ಸೇವೆಯ ಯಾವ ಉದಾತ್ತ ಆದರ್ಶವು ದೃಷ್ಟಿಗೋಚರವಾಗುತ್ತದೆಯೋ ಅದು ಕಾವ್ಯದ ಆದರ್ಶವಷ್ಟೇ ಅಲ್ಲ ವಿಶ್ವದ ಆದರ್ಶವೂ ಆಗಿದೆ—

"ಮಧುರ–ಮಧುರ ನನ್ನ ದೀಪವೇ ಉರಿ !
ಯುಗ–ಯುಗ ಪ್ರತಿದಿನ ಪ್ರತಿಕ್ಷಣ ಪ್ರತಿಫಲ
ಪ್ರಿಯತಮನ ಪಥವನ್ನು ಆಲೋಕಗೊಳಿಸು !

ವಿಪುಲ ಬಿಸಿಲಾಗಿ ಸೌರಭ ಬೀರಿ
ಮೃದು ಮೇಣದಂತೆ ಕರಗಲಿ ಮೃದು ತನು;
ಕೊಟ್ಟು ಪ್ರಕಾಶದ ಸಿಂಧು ಅಪರಿಮಿತ,
ನಿನ್ನ ಜೀವನದ ಅಣುವನ್ನು ಕರಗಿಸು ಕರಗಿಸು!"

ಭಾವಪಕ್ಷದೊಡನೆಯೇ 'ನೀರಜಾ'ದ ಕಾವ್ಯಸಾಮಗ್ರಿಯೂ ಸಮೃದ್ಧವಾಗಿದೆ. ಪ್ರಕೃತಿಯ ಅನೇಕ ಸುಂದರವಾದ ದೃಶ್ಯ-ಚಿತ್ರಗಳು, ರಾತ್ರಿ ಮತ್ತು ದಿವಸದ ವರ್ಣನೆಗಳು, ನಮ್ಮ ಭಾವಗಳನ್ನು ಉತ್ತೇಜಿತಗೊಳಿಸಿ ಅನುಭೂತಿಯನ್ನು ತೀವ್ರಗೊಳಿಸುತ್ತವಷ್ಟೇ ಅಲ್ಲ ಪ್ರಕೃತಿ ವರ್ಣನೆಯ ಸುಂದರತಮ ಸ್ಥಳಗಳನ್ನು ಕೂಡ ಪ್ರಸ್ತುತಪಡಿಸುತ್ತವೆ. 'ನೀರಜಾ'ದಲ್ಲಿ ಗೀತಗಳೊಡನೆ ಜಾನಪದ ಗೀತಗಳ ಹಾಗು ಉರ್ದು ಶೈಲಿಯಿಂದ ರೂಪಾಂತರಿಸಿದ ನವೀನ ಗೀತಗಳ ಪ್ರಯೋಗವು ಗೋಚರವಾಗುತ್ತದೆ. ಗೀತ ಕಾವ್ಯದ ನವೀನ ಶೈಲಿಯನ್ನು ದೃಷ್ಟಿಯಲ್ಲಿಟ್ಟುಕೊಂಡು 'ನೀರಜಾ'ದ ಛಂದ, ಲಯ, ಸಂಗೀತ, ಧ್ವನಿ, ತಾಲಗಳ ಬಗ್ಗೆ ವಿಚಾರಿಸಿದರೆ ನಿಸ್ಸಂದೇಹವಾಗಿ ಅದು 'ಛಾಯಾವಾದೀ' ಯುಗದ ಅತ್ಯುತ್ತಮ ಕೃತಿಯಾಗಿದೆ.

### ೪) 'ಸಾಂಧ್ಯಗೀತ' : (೧೯೩೪-೩೬)

"ಪ್ರಿಯ ಸಾಂಧ್ಯಗಗನ ಮೇರಾಜೀವನ (ಪ್ರಿಯಾ ಸಾಂಧ್ಯಗಗನ ನನ್ನ ಜೀವನ)"- ಇದು 'ಸಾಂಧ್ಯಗೀತ'ದ ಮೂಲ ಕವಿತೆಯಾಗಿದೆ. ಭಾವತನ್ಮಯತೆಯ ಆ ಸ್ಥಿತಿಯಲ್ಲಿ

ಭಾಷೆ ಮತ್ತು ಛಂದಗಳು ಯಾವಾಗ ಮೌನವಾಗುತ್ತವೆಯೋ ಆಗ ಆತ್ಮದ ಗೀತಗಳು ಪ್ರಾರಂಭವಾಗುತ್ತವೆ. ಇಂಥಹದೇ ಕೆಲವು ಸ್ಥಿತಿ 'ಸಾಂಧ್ಯಗೀತ'ವಾಗಿರುತ್ತದೆ. ಇಲ್ಲಿ ಮಹಾದೇವಿಯವರಿಗೆ ಸುಖ-ದುಃಖದಲ್ಲಿ ಸಾಮಂಜಸ್ಯದ ಅನುಭವವಾಗುತ್ತಿದೆ. ಇದು 'ನೀರಜಾ'ದಿಂದಲೇ ಪ್ರಾರಂಭವಾಗಿತ್ತು. ಇದಲ್ಲದೆ 'ಸಾಂಧ್ಯಗೀತದಲ್ಲಿ ಒಂದು ಆತ್ಮತೋಷದ ಭಾವನೆಯೂವುಂಟು. ವಿರಹದ ತೀವ್ರತರ ಅನುಭೂತಿಯೊಡನೆ ವ್ಯಾಪಕತೆ, ಒಂದು ಪುಲಕವೂ ಹಾಗು ಸುಖಾನುಭೂತಿಯೂ ಸಹವುಂಟು–

"ಪ್ರಿಯ ಚಿರಂತನಾಗಿದ್ದಾನೆ ಸಜನೀ ಕ್ಷಣ-ಕ್ಷಣ ನವೀನ
ಸೌಭಾಗ್ಯವತಿ ನಾನು.

*   *   *   *   *   *

"ನಾನು ಯಾರದೋ ಮೂಕ ಛಾಯೆಯಾಗಿದ್ದೇನೆ,
ಹೇಗೆ ಗುರುತಿಸಲಾರೆ."

ಈ ಕೃತಿಯಲ್ಲಿ ಉಪಾಸನೆಯ ಭಾವವು, ತನ್ನ ಪರಾಕಾಷ್ಠೆಯನ್ನು ಮುಟ್ಟಿದ ಮತ್ತು ಈ ಗೀತಗಳನ್ನು 'ಸಾಧನಾತ್ಮಕ ಗೀತಗ'ಳೆಂದು ಕರೆಯಬಹುದು. ಅನುಭೂತಿಯ ಮೇಲೆ ಚಿಂತನೆಯ ಪ್ರಭಾವವು ಅವಶ್ಯವಾಗಿ ಬಿದ್ದಿದೆ. ಆದರೆ, ಈ ಚಿಂತನೆಯು ಅವರ ಆಸ್ಥೆ ಮತ್ತು ವಿಶ್ವಾಸವನ್ನು ದೃಢಪಡಿಸುತ್ತವೆ. ನಿಷ್ಠೆಯೂ ದೃಢತರವಾಗಿದೆ.

'ನೀಹಾರ'ದ ಭಾವಜಗತ್ತು 'ಸಾಂಧ್ಯಗೀತ'ದಲ್ಲಿ ಒಂದು ಗಹನತೆ, ವ್ಯಾಪಕತೆಯನ್ನು ಪಡೆದಿದೆ. ದಾರ್ಶನಿಕ ಏಕಾಗ್ರತೆಯು ಉಚ್ಚಸ್ತರದ್ದಾಗಿವೆ. ಜೀವನದ ಅಭಿಲಾಷೆ ಇಲ್ಲಿ ತೀವ್ರವಾಗಿದೆ. ತೃಪ್ತಿಯಲ್ಲಿಯೇ ಜೀವಿಸುವದು ಅವರಿಗೆ ಇಷ್ಟವಿಲ್ಲ. ತೃಪ್ತಿಯಲ್ಲಿಯ ಜೀವನವನ್ನು ಅವರೆಂದೂ ಒಪ್ಪುವದಿಲ್ಲ. 'ಸಾಂಧ್ಯಗೀತ'ದಲ್ಲಿ ಅಶ್ರುಜಲದ ಕ್ಷಾರವನ್ನು ಕುಡಿದು ಸ್ನೇಹ ರಸವನ್ನು ಹಂಚುವ ಅಭಿಲಾಷೆ ಯುಂಟು–["ಆಂಸುವೋಂಕಾ ಕ್ಷಾರ ಪೀ ಮೈ, ಬಾಂಟತೀನಿತ ಸ್ನೇಹಕಾ ರಸ."] ಇದು ಕವಯಿತ್ರಿಯ ವ್ಯಕ್ತಿತ್ವ ವನ್ನು ಸ್ಪಷ್ಟಪಡಿಸುತ್ತದೆ. ಅದಲ್ಲದೇ ಲೋಕಹೃದಯ ದೊಡನೆ ಏಕಾಗ್ರತೆಯ ಪ್ರವೃತ್ತಿಯೂ ಕಂಡು ಬರುತ್ತದೆ.

ಈ ಕೃತಿಯ ಕಾವ್ಯಕಲೆಯಲ್ಲಿ 'ನೀರಜಾ'ದ ಸ್ತರವನ್ನೇ ಉಳಿಸಿಕೊಂಡು ಹೋಗುವ ಪ್ರಯಾಸವು ಗೋಚರ ವಾಗತ್ತದೆ. ಆದರೆ, 'ನೀರಜಾ'ದ ಗೀತಗಳಲ್ಲಿ ಯಾವ ಕೋಮಲತೆ, ಸ್ಪಷ್ಟತೆ ಹಾಗೂ ಮಾರ್ಮಿಕತೆಯುಂಟೋ ಅದು 'ಸಾಂಧ್ಯಗೀತ'ದಲ್ಲಿ ಸಪ್ಪೆಯಾಗಿ ಕಾಣುತ್ತದೆ. ಹಾಗೂ ಗೀತಗಳ ಮೇಲೆ ಒಂದು ರಹಸ್ಯಾವರಣವುಂಟು. ಇದು ಅವರದೊಂದು ನಿಶ್ಚಿತವಾದ ಸೀಮೆಯೇ. ರೂಪ ಯೋಜನೆಯಲ್ಲಿ ಆ ಪರಿಷ್ಕೃತಿ ಇಲ್ಲ, ಅಭಿವ್ಯಕ್ತಿಯಲ್ಲಿ ಸ್ವಲ್ಪ ಶಿಥಿಲತೆ ಕಂಡು ಬರುತ್ತವೆಯಷ್ಟೇ ಅಲ್ಲದೆ ಕಲಿ ಯಲ್ಲಿ ಜಡತ್ವದ ಹಾಗೆ ತೋರುತ್ತವೆ. ಆದರೆ, ಭಾವನೆ

ಮತ್ತು ಅನುಭೂತಿಯ ವಿಷಯದಲ್ಲಿ 'ಸಾಂಧ್ಯಗೀತ'ದಲ್ಲಿ ಒಂದು ವಿಕಾಸವು. ಭಾವನಾವಿಕಾಸದ ದೃಷ್ಟಿಯಿಂದ ಮಹಾದೇವಿಯವರ ಗೀತಗಳನ್ನು ರವೀಂದ್ರರ 'ಗೀತಾಂಜಲಿ'ಯೊಡನೆ ಹೋಲಿಸುವ ವಾಡಿಕೆಯುಂಟು. ಭಾವಾನುಭೂತಿಯ ವಿಷಯದಲ್ಲಿ ಮಾತ್ರ 'ಗೀತಾಂಜಲಿ' ಹಾಗೂ 'ಸಾಂಧ್ಯಗೀತ'ಗಳ ಭಾವನೆಗಳಲ್ಲಿ ಸಾಮಿಪ್ಯವುಂಟು. ಭಾವೋಚ್ಛ್ವಾಸದಲ್ಲಿ ಅದೇ ತೀವ್ರತೆಯುಂಟು. 'ಗೀತಾಂಜಲಿ'ಯಂತೆ ಇಲ್ಲಿ ಕಲಾಪಕ್ಷವು ಅಷ್ಟೊಂದು ಪ್ರಭಾವಪೂರ್ಣವಾಗಿಲ್ಲ.

ಶೃಂಗಾರವು ಮನಸ್ಸಿನ ಉತ್ಸಾಹ-ಹಾಗು ಉಲ್ಲಾಸದ ದ್ಯೋತಕವಾಗಿದೆಯಷ್ಟೇ ಅಲ್ಲ ನಮ್ಮನ್ನು ಮತ್ತು ಬೇರೆಯವರನ್ನು ಪ್ರಸನ್ನಗೊಳಿಸಲು ಶೃಂಗಾರದ ಆವಶ್ಯಕತೆಯುಂಟಾಗುತ್ತದೆ. ಕೆಳಗೆ ಉದ್ಧರಿಸಲ್ಪಟ್ಟ ಸರಸ ಉದಾಹರಣೆಗಳನ್ನು ನೋಡಬಹುದು-

೧) **ಲೌಕಿಕ ಶೃಂಗಾರ :**

"ರಂಜಿತಗೊಳಿಸು ಈ ಶಿಥಿಲವಾದ ಚರಣಗಳನು ನವ
ಅಶೋಕದ ಅರುಣರಾಗದಿಂದ,
ನನ್ನ ಶೃಂಗಾರಕ್ಕೆ ಇಂದು ತರು ಮಾಧುರ್ಯ
ರಜನೀಗಂಧದಪರಾಗ;

ಜಾಜಿಯ ಮುಚ್ಚಿದ ಮೊಗ್ಗುಗಳಿಂದ ಸಖೀ ನನ್ನ
ವೇಣಿಯನ್ನು ಶೃಂಗರಿಸು !
ಅಲೆಗಳ ಹಾಗೆ ಅಲೆಯುತ್ತಾ ಬರುತ್ತದೆ ಮಧುರ
ಪವನ !"

೨) **ಆಧ್ಯಾತ್ಮಿಕ ಶೃಂಗಾರ** :

"ಶಶಿದರ್ಪಣದಲ್ಲಿ ನೋಡಿ-ನೋಡಿ,
ನಾನು ತಿಮಿರಕೇಶಗಳನ್ನು ಬಿಡಿಸಿದೆನು,
ತಾರಕ ಪಾರಿಜಾತಗಳನ್ನು ಆರಿಸಿ ಹೆಣೆದೆನು,
ಅಶೇಷಕಿರಣಗಳ ಅವಗುಂಠನ ಮಾಡಿ;
ಏಕೆ ಇಂದು ನನ್ನ ಅಭಿನವ ಶೃಂಗಾರವು
ಅವನನ್ನು ಪ್ರಸನ್ನ ಗೊಳಿಸಲಿಲ್ಲ ?"

ಮಹಾದೇವಿಯವರು ಮಾನವ ಮನಸ್ಸಿನ ಕವಯಿತ್ರಿಯರು. ಪ್ರಕೃತಿಯಿಂದಲೇ ತಮ್ಮ ಶೃಂಗಾರ ಮಾಡಿಸಿಕೊಳ್ಳುತ್ತಾರೆ. ಇದನ್ನು ಮೊದಲನೇ ಉದಾಹರಣೆಯಲ್ಲಿ ಅರ್ಥವತ್ತಾಗಿ, ಸುಂದರವಾಗಿ ಚಿತ್ರಿಸಲಾಗಿದೆ. ಇನ್ನೊಂದು ಅರ್ಥದಲ್ಲಿ ಪ್ರಕೃತಿಯೇ ಸ್ವತಃ ಅವರ ಕಾವ್ಯವನ್ನು ಅಲಂಕರಿಸುವ ಕಾರ್ಯವನ್ನು ಮಾಡುತ್ತದೆ. ವಿರಾಟದ ಪುರುಷನ ಮಿಲಾಪದ ಉತ್ಕಂಠೆಯಲ್ಲಿ ಪ್ರಕೃತಿಯ ಉಪಕರಣಗಳನ್ನು ತಮ್ಮ ಶೃಂಗಾರದ ಸಾಧನಗಳನ್ನಾಗಿ ಮಾಡಿಕೊಳ್ಳುತ್ತಾರೆಂಬುದನ್ನು ಮೇಲೆ ಉಲ್ಲೇಖಿಸಿದ ಎರಡನೇ ಉದಾಹರಣೆಯಿಂದ ಕಂಡುಕೊಳ್ಳಬಹುದು.

'ಸಾಂಧ್ಯಗೀತ'ದಲ್ಲಿ ಪ್ರಣಯಕೋಪದ ಆಧಿಕ್ಯವುಂಟು. ಇದಕ್ಕೆ ಅವರ ಸಸೀಮತೆ, ನಿಜತ್ವ ಹಾಗೂ ವೇದನೆಯ ಅಭಿಮಾನವೇ ಕಾರಣವಾಗಿದೆ.

'ಸಂಯೋಗ'ದ ಹೆಸರಿನಲ್ಲಿ ಮಹಾದೇವಿಯವರ ಗೀತಗಳಲ್ಲಿ ಕೇವಲ 'ಸ್ವಪ್ನ ಸಂಯೋಗ'ವು ಮಾತ್ರ ಕಂಡು ಬರುತ್ತದೆ.

'ಸ್ವಪ್ನ ಸಂಯೋಗದ' ಉದಾಹರಣೆಗಳು ಮಹಾ ದೇವಿಯವರ ಕಾವ್ಯದಲ್ಲಿ ಸುಲಭವಾಗಿವೆ. 'ನೀಹಾರ'ದಿಂದ 'ದೀಪಶಿಖಾ'ದವರೆಗೆ 'ಸ್ವಪ್ನಮಿಲನ' ಅಥವಾ 'ಸ್ವಪ್ನ ಸಂಕೇತ'ದ ಬಾಹುಲ್ಯವುಂಟು.

'ದುಃಖವಾದ'ಕ್ಕೆ ಸಂಬಂಧಿಸಿದ ಮಹಾದೇವಿಯವರ ಗೀತಗಳಲ್ಲಿ 'ಮೈ ನೀರ ಭರೀ ದುಃಖಕೀ ಬದಲೀ' (ನಾನು ನೀರು ತುಂಬಿದ ದುಃಖದ ಮೋಡ) ಎಂಬ ಗೀತವು ಅತ್ಯಂತ ಮಹತ್ವಪೂರ್ಣವಾಗಿದೆ. ಇದೇ ಗೀತದ ಕೊನೆಯ ಪಂಕ್ತಿ ಗಳು ಅತ್ಯಂತ ಮಾರ್ಮಿಕವಾಗಿವೆ—

"ವಿಸ್ತೃತ ಆಕಾಶದ ಯಾವದೇ ಮೂಲೆಯು
ನನ್ನದೆಂದೂ ಆಗದಿರಲಿ,
ಪರಿಚಯ ಇಷ್ಟೇ, ಇದೇ ಇತಿಹಾಸ
ನಿನ್ನೆ ಉದಯಿಸಿತ್ತು ಇಂದು ಅಳಿದುಹೋಯಿತು."

ಛಾಯಾವಾದೀ ಕವಿಗಳು ಒಂದು ಕಡೆ ಪ್ರಕೃತಿಯಲ್ಲಿ 'ವಿರಾಟ'ದ ಛಾಯೆಯನ್ನು ಕಾಣುವರು. ಮತ್ತೊಂದೆಡೆಗೆ ಅದರಲ್ಲಿ ತಮ್ಮ ಛಾಯೆಯನ್ನೂ ಕಾಣುತ್ತಾರೆ. ಅಂದರೆ ಪ್ರಕೃತಿಯೊಡನೆ ತಾದಾತ್ಮ್ಯ ಸಂಬಂಧವನ್ನು ಹೊಂದಿರುತ್ತಾರೆ. ಮಹಾದೇವಿಯವರ ಕಾವ್ಯದಲ್ಲಿಯೂ ಸಹ ಇದೇ ಪ್ರಕೃತಿಯೊಡನೆ 'ತಾದಾತ್ಮ್ಯ ಸಂಬಂಧ'ದ ಪ್ರವೃತ್ತಿ ಕಂಡು ಬರುತ್ತದೆ.

ಸಾಂಧ್ಯಗೀತ'ದ ಅಧಿಕಾಂಶ ಗೀತಗಳಲ್ಲಿ ಪ್ರಕೃತಿಯು ಅನುಭೂತಿಯ ಅಂಗವಾಗಿಯೇ ಬಂದಿದೆ. ದುಃಖ ಮತ್ತು ನಿರಾಶೆ, ವಿರಹ ಮತ್ತು ವಿಕಲತೆ ತ್ಯಾಗ ಮತ್ತು ಸಹಿಷ್ಣುತೆ ಅವರ ಜೀವನದಲ್ಲಿ ಬೌದ್ಧ ಧರ್ಮದ ಪ್ರಭಾವ ದಿಂದಲೇ ಬಂದಿವೆ. ಮತ್ತು ಅವುಗಳಿಗೋಸ್ಕರ ಪ್ರಕೃತಿ ಯಿಂದಲೂ ಕವಯಿತ್ರಿಗೆ ಪ್ರೇರಣೆ ದೊರೆಯುತ್ತದೆ.

ಮಹಾದೇವಿಯವರು "ಪ್ರಿಯ ಸಾಂಧ್ಯಗಗನ ಮೇರಾ ಜೀವನ" ಎಂದು ಅವಶ್ಯವಾಗಿ ಹೇಳುತ್ತಾರೆ. ಆದರೆ, ಅವರ ಮನಸ್ಸು ಎಲ್ಲಕ್ಕಿಂತಲೂ ಹೆಚ್ಚಿಗೆ ರಾತ್ರಿಯ ವರ್ಣನೆ ಯಲ್ಲಿ ತಲ್ಲೀನವಾಗಿದೆ. ರಾತ್ರಿಯ ಬಗ್ಗೆ ಅವರ ಆಕರ್ಷಣೆ ಅವರ ಎಲ್ಲ ಐದು ಕಾವ್ಯ ಗ್ರಂಥಗಳಲ್ಲಿ ಕ್ರಮವಾಗಿ ವಿಕಾಸ ಗೊಳ್ಳುತ್ತಾ 'ಸಾಂಧ್ಯಗೀತ' ಮತ್ತು 'ದೀಪಶಿಖಾ'ದಲ್ಲಿ ನಿರ್ವಾಣೋನ್ಮುಖವಾಗಿದೆ.

'ಸಾಂಧ್ಯಗೀತ'ದಲ್ಲಿ ಉಳಿದ ಅವರ ಕಾವ್ಯಗ್ರಂಥಗಳಂತೆ ರೂಪಕಗಳ ಸಮೃದ್ಧ ಭಂಡಾರವುಂಟು. ವಿರಹ ಸಾಧಿಕೆಯಾಗಿದ್ದರಿಂದ ವಿರಹ ಸಂಬಂಧೀ ರೂಪಕ ಅಧಿಕ ಸಂಖ್ಯೆಯಲ್ಲಿವೆ. ಈ ಸಂದರ್ಭದಲ್ಲಿ 'ಪ್ರಿಯಸಾಂಧ್ಯ ಗಗನ ಮೇರಾ ಜೀವನ', 'ಶಲಭ ಮೈ ಶಾಪಮಯ ವರ ಹೂಂ', 'ಮೈ ನೀರ ಭರೀ ದುಃಖಕೀ ಬದಲೀ', 'ಶೂನ್ಯ ಮಂದಿರ ಮೇ ಬನೂಂಗೀ ಆಜ ಪ್ರತಿಮಾ ತುಮ್ಹಾರೀ' ಮುಂತಾದ ಗೀತಗಳನ್ನು ಉಲ್ಲೇಖಿಸಬಹುದು.

೫) **'ದೀಪಶಿಖಾ'**:

'ಯಾಮಾ'ದ ನಂತರದ ಬೃಹತ್ ಹಾಗು ಪ್ರೌಢಕೃತಿ 'ದೀಪಶಿಖಾ'. ಈ ಅಮೋಘ ಕಾವ್ಯಗ್ರಂಥದಲ್ಲಿ ಮಹಾದೇವಿಯವರ ಕಾವ್ಯವು ತನ್ನ ಪರಾಕಾಷ್ಠೆಯನ್ನು ಮುಟ್ಟಿದೆ. ಸಧ್ಯಕ್ಕೆ ಇದೇ ಅವರ ಕೊನೆಯ ಕಾವ್ಯಕೃತಿಯಾಗಿದೆ.

"ಪಂಥ ರಹನೇ ದೋ ಅಪರಿಚಿತ
ಪ್ರಾಣರಹನೇ ದೋ ಅಕೇಲಾ"

ಎಂಬ ಗೀತದ ಆಸ್ಥೆ ಹಾಗು ಆವೇಗದೊಡನೆ 'ದೀಪಶಿಖಾ' ಪ್ರಾರಂಭವಾಗುತ್ತದೆ. ಮತ್ತು "ದೀಪ ಮೇರೇ ಜಲ ಅಕಂಪಿತ", "ಪೂಛತಾ ಕ್ಯೋಂ ಶೇಷ ಇತನೀ ರಾತ"- ಎಂಬ ಗೀತಗಳ ಮುಖಾಂತರ ಅಸ್ತವ್ಯಸ್ತ ಸ್ಥಿತಿಯಲ್ಲಿ ಸಾಧನೆಯ ಮಾರ್ಗದ ಮುಖಾಂತರ ಮುಂದೆ ಸಾಗಲು ಇಚ್ಛಿಸುತ್ತಾರೆ.

ಈ ಕೃತಿಯಲ್ಲಿ ಅವರಿಗೆ ಆತ್ಮವಿಶ್ವಾಸದ ಸರ್ವಾಧಿಕಶಕ್ತಿ ಪ್ರಾಪ್ತವಾಗಿದೆ. 'ದೀಪಶಿಖಾ'ದಲ್ಲಿ ಅವರ ಆತ್ಮಚೇತನ ಅತ್ಯಧಿಕ ಊರ್ಜಿತ ಹಾಗು ಆತ್ಮನಿಷ್ಠವಾಗಿದೆ. ಆತ್ಮ ದರ್ಶನದ ದೃಷ್ಟಿಯಿಂದ 'ದೀಪಶಿಖಾ'ದ ಮಹತ್ವವಿದೆ. ಇದರ ಗೀತಗಳು ಮಹಾದೇವಿಯವರ ಸಾಧನೆ ಹಾಗು ಸಿದ್ಧಿಯ ಗೀತಗಳಾಗಿವೆ ಇದರಲ್ಲಿ ಅನುಭೂತಿಯ ಸೂಕ್ಷ್ಮತೆ ಯುಂಟು.

'ಸಾಂಧ್ಯಗೀತ'ಕ್ಕೆ 'ಸಂಧ್ಯಾ' ಪೃಷ್ಠಭೂಮಿಯಾಗಿ ದೊರೆತಿದ್ದರೆ 'ದೀಪಶಿಖಾ'ಕ್ಕೆ 'ರಾತ್ರಿ'ಯು ಪೃಷ್ಠಭೂಮಿ ಯಾಗಿದೆ. 'ದೀಪಶಿಖಾ'ದ ಪ್ರಕಾಶನವೂ ಸಹ ಒಂದು ಘಟನೆ. ಮಹಾದೇವಿಯವರೇ ಹೇಳಿದಂತೆ— "ಜೀವನ ಮತ್ತು ಮೃತ್ಯುವಿನ ಈ ಬಿರುಗಾಳಿಯ ದಿನಗಳಲ್ಲಿ ರಚಿಸ ಲ್ಪಟ್ಟ ಗೀತಗಳು ಮಳೆಯಿಂದ ಕೂಡಿದ ಬಿರುಗಾಳಿ ಮತ್ತು ಪ್ರಳಯದ ಮಧ್ಯದಲ್ಲಿದ್ದಂಥ ದೇವಸ್ಥಾನದಲ್ಲಿ ಉರಿಯುತ್ತಿ ರುವಂಥ ನಿಷ್ಕಂಪ 'ದೀಪಶಿಖಾ' (ದೀಪಜ್ವಾಲೆ)".

ಈ ಕಾವ್ಯಕೃತಿಯ ಇನ್ನೊಂದು ಮಹತ್ವವೇನೆಂದರೆ ಮಹಾದೇವಿಯವರ 'ಯೋಗಮಂದಿರದ ದ್ವಾರ'ವು ತೆರೆ ದಿದೆ. ಮತ್ತು ಕರುಣೆಯ ಸ್ನೇಹದಲ್ಲಿ ಉರಿಯುತ್ತಿರುವ ಈ ದೀಪಜ್ವಾಲೆಯು ಏಕಾಕಿಯಾಗಿ ತನ್ಮಯತೆ ಹಾಗು ವಿಶ್ವಾಸದಲ್ಲಿ ಮಂದಹಾಸವನ್ನು ಬೀರುತ್ತದೆ.

'ದೀಪಶಿಖಾ'ದಲ್ಲಿ ಒಟ್ಟು ೫೧ ಗೀತಗಳಿವೆ. ಪ್ರತಿಯೊಂದು ಗೀತಕ್ಕೆ ಒಂದೊಂದು ಅರ್ಥವಾಹಕ ಚಿತ್ರವಿರುತ್ತದೆ. ಈ ಪ್ರಕಾರದ ಚಿತ್ರಮಯ ಗೀತಪ್ರಕಾಶನವು ಹಿಂದೀ ಸಾಹಿತ್ಯದಲ್ಲಿ ನವನೂತನವಾಗಿದೆ. ಇನ್ನೊಂದು ವೈಶಿಷ್ಟ್ಯವೆಂದರೆ ಪ್ರತಿಯೊಂದು ಗೀತವು ಕವಯಿತ್ರಿಯ ಹಸ್ತಲಿಪಿಯಲ್ಲಿಯೇ ಮುದ್ರಿತವಾಗಿರುತ್ತದೆ.

'ಆತ್ಮನಿವೇದನೆ' ಮತ್ತು 'ಮನರಂಜನೆ' ಇವೆರಡು 'ಗೀತಿಕಾವ್ಯ'ದ ಪ್ರಯೋಜನಗಳು. 'ದೀಪಶಿಖಾ'ದ ಗೀತಗಳಲ್ಲಿ 'ಆತ್ಮನಿವೇದನೆಯು', ಪ್ರೇರಣೆಯುಂಟು. ಆದರೆ, ಮನರಂಜನೆಯು ನಿಶ್ಚಿತವಾಗಿಯೂ ಅವುಗಳ ಪ್ರಯೋಜನವಲ್ಲ. ಈ ಗೀತಗಳ ಅಧ್ಯಯನದಿಂದ ಕೆಳಗಿನ ಈ ಮೂರು ಮುಖ್ಯ ಸಂಗತಿಗಳು ಕಂಡುಬರುತ್ತವೆ—

(೧) 'ದೀಪಶಿಖಾ' ಕವಯಿತ್ರಿಯ ಮನಸ್ಸಿನ ಪ್ರತೀಕವಾಗಿದೆ.

(೨) 'ದೀಪಶಿಖಾ'ದಲ್ಲಿ ಫಾರಸಿಯ 'ಶಮಾ' (ಜ್ವಾಲೆ) ದಂಥಹ ಐಂದ್ರಿಯ ವಾಸನಾದ ದಾಹಕ ಜ್ವಾಲೆಯಿಲ್ಲ. ಆದರೆ, ಮಧುರ ಮಧುರವಾಗಿ ಉರಿಯುತ್ತ ಪೃಥ್ವಿಯ ಕಣ-ಕಣದಲ್ಲಿ ಆಲೋಕವಿತರಣ ಮಾಡುತ್ತಿರುವಂಥ ಕರುಣೆಯ ಸ್ನಿಗ್ಧವಾದ ಜ್ವಾಲೆಯುಂಟು.

(೩) ಈ ವೇದನೆ ಅಥವಾ ಕರುಣೆಗೆ ಅಜ್ಞಾತ ಪ್ರಿಯತಮನ ಸಂಕೇತವೇ ಕಾರಣ ಮತ್ತು ಅದು ಆ ಕರು

ಣೆಯು ಸ್ನಿಗ್ಧ ಜ್ವಾಲೆಗೆ ಅಸೀಮ ಬಲ ಹಾಗು ದೃಢ ವಿಶ್ವಾಸವನ್ನು ಕೊಡುತ್ತದೆ.

'ದೀಪಶಿಖಾ'ದ ಗೀತಗಳ ಅನುಭೂತಿ ಪಾರ್ಥಿವ ಅನುಭೂತಿಯಾಗಿದೆ ('ದೀಪಶಿಖಾ'- ಡಾ. ನಗೇಂದ್ರ). ಅದರ ವಿಶ್ಲೇಷಣೆ ಮಾಡಲಾಗಿ ೧) ಉರಿಯುವ ಭಾವನೆ ೨) ವಿಶ್ವದ ಬಗ್ಗೆ ಆರ್ದ್ರ ಕಾರುಣ್ಯಭಾವ ಮತ್ತು ೩) ಅಜ್ಞಾತ ಪ್ರಿಯನ ಸಂಕೇತ- ಎಂಬ ಈ ಮೂರು ಮುಖ್ಯ ತತ್ವಗಳು ಕಂಡು ಬರುತ್ತವೆ. ಈ ಮೂರು ತತ್ವಗಳು ಪರಸ್ಪರ ಒಂದಕ್ಕೊಂದು ಕಾರ್ಯ-ಕಾರಣ ಸಂಬಂಧದಲ್ಲಿ ಬಂಧಿಸಲ್ಪಟ್ಟಿವೆ.

" 'ದೀಪಶಿಖಾ'ದ ಪ್ರೇರಕ ಅನುಭೂತಿ ಛಾಯೆಯಂತೆ ಸೂಕ್ಷ್ಮವಾಗಿದೆ ಮತ್ತು ಮೇಣಕ್ಕಿಂತಲೂ ಮೃದುವಾಗಿದೆ. ಆದರೆ. ಹೃದಯದ ವೇದನೆಯು ಹಾಗೆ ತ್ರೀವ್ರವಾಗಿಲ್ಲ." ('ದೀಪಶಿಖಾ'— ಡಾಂ. ನಗೇಂದ್ರ.)

ವಿಸ್ಮಯಭಾವಯುಕ್ತ ಮಧುರ ಸಂಕೇತಗಳು ಈ ಕೃತಿಯ ಗೀತಗಳಲ್ಲಿ ಅಲ್ಲಲ್ಲಿ ಕಂಡು ಬರುತ್ತವೆ. ಕೆಲವು ಮಧುರ ಸಂಕೇತಗಳ ಉದಾಹರಣೆಗಳನ್ನು ನೋಡಬಹುದು—

೧) "ತಮವು ವರ್ತಿಯನ್ನು ಅರಿತಿದೆ,
ವರ್ತಿಯು ಈ ಸ್ನೇಹವನ್ನು, ಸ್ನೇಹವು ರಜದ
ಸೆರಗನ್ನು ಗುರುತಿಸಿದೆ

ಚಿರಬಂಧನದಲ್ಲಿ ನನ್ನನ್ನು ಬಂಧಿಸಿ ಕರಗುವ
ವರ ನೀಡಿ ಹೋಗು.

೨) "ಚೇತನವು ವಿದ್ಯುತ್ತಿನ ತೂಲಿಯನ್ನು
ತೆಗೆದುಕೊಂಡು
ಮೃದು ವ್ಯೋಮ ಫಲಕದಂತೆ ಹೃದ್ಮನ
ಅಶ್ರುವಿನಲ್ಲಿ ಜ್ವಾಲೆಯ ಕಣಗಳನ್ನು
ಮೇಳವಿಸಿ ನಾನು
ಚಿರಮುಕ್ತ ನಿನ್ನನ್ನು ಜೀವನದ ಬಂಧನದ
ಹಿತಕ್ಕಾಗಿ ವಿಕಲವಾಗಿಸಿ ಹೋಗುತ್ತಿದ್ದೆ."

'ದೀಪಶಿಖಾ'ದ ಗೀತಗಳಲ್ಲಿ ಅದರ ಚಿತ್ರಗಳಂತೆಯೇ ಕೇವಲ ಎರಡೇ ವರ್ಣಗಳುಂಟು— ತಿಳಿ ನೀಲವರ್ಣ ಮತ್ತು ಶುಭ್ರವರ್ಣ. ಅವುಗಳ ವೈಭವ ಅಪ್ರತಿಮವಾಗಿದೆ.

ಈ ಕಾವ್ಯಕೃತಿಯಲ್ಲಿ ಲೋಕ ಹೃದಯದೊಡನೆ ಅದ್ವೈತ ಸಂಬಂಧ ಸ್ಥಾಪಿಸುವ ಅಭಿಲಾಷೆಯುಂಟು. ಆತ್ಮ ದುಃಖದೊಡನೆ ವ್ಯಾಪಕವಾದ ಜೀವನ-ದುಃಖ ತಿಳಿಸುವ ಶಕ್ತಿಯುಂಟು ಮತ್ತು ಸುಖ-ದುಃಖದ ಸಾಮಂಜಸ್ಯ,-ಸಮ ರಸಮಯೀ ದೃಷ್ಟಿಕೋನ ಇವುಗಳಲ್ಲಿ ಗೀತದ ಮೂಲವು ಆತ್ಮನಿವೇದನೆಯೇ ಆಗಿದೆಯಲ್ಲದೇ 'ದೀಪಶಿಖಾ' ಕವಯಿತ್ರಿಯ ಮನದ ಪ್ರತೀಕವಾಗಿ ಬಂದಿದೆ. ಇಲ್ಲಿ ಗೀತ ಗಳಿಗೆ ಭಾವಾತ್ಮಕ ರೂಪವು ಪ್ರಾಪ್ತವಾಗಿದೆ. ಮತ್ತು ಅದು ತನ್ಮಯತೆ ಹಾಗು ಆಕರ್ಷಣೆಯಲ್ಲಿ ಅಭೂತಪೂರ್ವವಾಗಿದೆ.

'ದೀಪಶಿಖಾ'ದ ಉದಾತ್ತ ಹಾಗು ಉಚ್ಚ ಮಟ್ಟದ ಮತ್ತು ಆಧ್ಯಾತ್ಮಿಕ ಭಾವಗಳಿಗೆ ಕೇವಲ ಕಾಮದ ಸ್ಪಂದನ ಎಂದು ಹೇಳಲಿಕ್ಕಾಗದು. ಅವರ ಅತೃಪ್ತಿಯಲ್ಲಿ, ಅಸಂತೋಷದಲ್ಲಿ ಭೌತಿಕ ಸಂಸ್ಪರ್ಶವಿಲ್ಲ.

ಈ ಕೃತಿಯಲ್ಲಿ ಅನುಭೂತಿಯ ತೀವ್ರತೆಯುಂಟು. ಅದರಲ್ಲಿ ಲೌಕಿಕ ಪ್ರೇಮದ ಆವೇಗ ಮತ್ತು ಜಾನಪದ ಗೀತಗಳ ವಿರಹವೂ ಮುಖರಿತವಾಗಿದೆ—

"ಹಾದಿ ನೋಡಿ ರಾತ್ರಿ ಕಳೆದೆ."

(ಪಥ ದೇಖ ಬಿತಾದೀ ರಾತ)

* * * * * * * *

"ಮಧುರ ಕೋಗಿಲೆಯೇ ಮೆಲ್ಲ-ಮೆಲ್ಲಗೆ ಕೂಗು."

(ಮಧುರ ಪಿಕ ಹೌಲೇ-ಹೌಲೇ ಬೋಲ)

* * * * * * * *

"ಹಾ ! ಈ ಮಾರ್ಗವನು ಅರಿಯೆ ನಾನು."

(ಮೈ ನ ಯಹ ಪಥ ಜಾನತೀರೀ !)

* * * * * * * *

"ಎಲ್ಲಿಂದ ಬಂದವು ಶ್ಯಾಮ ಘನ."

(ಕಹಾಂಸೇ ಆಯೇ ಬಾದಲ ಕಾಲೇ.)

'ದೀಪಶಿಖಾ'ದ ವರೆಗೆ ತಲುಪಿ ಅವರ ವೇದನೆಯಲ್ಲಿ ಆನಂದವು ಕೂಡುತ್ತದೆ. ನಿಜವಾಗಿಯೂ ತಮ್ಮ ವ್ಯಕ್ತಿ

ಯನ್ನು ವಿಶ್ವಜೀವನ ಮತ್ತು ಚೇತನದ ಪ್ರವಾಹದಲ್ಲಿ ತೇಲಿಬಿಟ್ಟಿದ್ದರಿಂದ ಅಲ್ಲಿ ವ್ಯಕ್ತಿಗತ ದುಃಖ ಉಳಿಯಲಾರದು. ಇಲ್ಲಿ ವ್ಯಕ್ತಿಚೇತನವನ್ನು ಸರ್ವಾತ್ಮಚೇತನದಲ್ಲಿ ಒಂದುಗೂಡಿಸುವ ಉಪಕ್ರಮವುಂಟು. ಪ್ರಣಯದ ಸೂಕ್ಷ್ಮ ಸಂಕೇತದಲ್ಲಿಯೂ ಸಹ ಅಲೌಕಿಕತೆ ಕಂಡು ಬರುತ್ತದೆ—

"ಪ್ರಿಯನನ್ನು ಅರಿಯದವಳು."

(ಜೋ ನ ಪ್ರಿಯ ಪಹಚಾನತೀ)

ಮಹಾದೇವಿಯವರ 'ಅಲೌಕಿಕ'ವು ಅದೇ ವಿಶ್ವಜೀವನಚೇತನದ ಪ್ರತೀಕವಾಗಿರುತ್ತದೆ ಮತ್ತು ಅದಕ್ಕಾಗಿಯೇ ಅವರ ಆತ್ಮವು ಪ್ರಣಯನಿವೇದನೆ ಮಾಡುತ್ತದೆ.

'ದೀಪಶಿಖಾ'ದಲ್ಲಿ ಲೋಕಹೃದಯದೊಡನೆ ಏಕಾಕಾರ (ಅದ್ವೈತಭಾವ) ವಾಗುವ ಹಾಗು ವಿಶ್ವಚೇತನ ಅಥವಾ ಸರ್ವಾತ್ಮಚೇತನದ ಅನುಭೂತಿಯನ್ನು ಪಡೆಯುವ ಯಾವ ಭಾವವಿದೆಯೋ ಅದನ್ನು 'ಗೀತಾಂಜಲಿ'ಯ ಸಮೀಪದಲ್ಲಿರಿಸಲು ಸಮರ್ಥವಾಗಿದೆಯೆಂಬುದನ್ನು ಕೆಳಗಿನ ಪಂಕ್ತಿಗಳಲ್ಲಿ ನೋಡಬಹುದು—

೧) "ಸಖೀ ನಾನು ಕಣ-ಕಣವನ್ನು
ಗುರುತಿಸಿಹೋದೆ."

(ಅಲೀ ಮೈ ಕಣ-ಕಣ ಪಹಚಾನ ಚಲೀ).

೨) "ಇದು ಮಂದಿರದ ದೀಪ,
ಶಾಂತ ಉರಿಯಲಿಬಿಡು."
(ಯಹ ಮಂದಿರ ಕಾ ದೀಪ,
ನೀರವ ಜಲನೇ ದೋ).

'ದೀಪಶಿಖಾ'ದ ಗೀತಗಳು ಭಾಷೆ ಹಾಗು ಭಾವ ಪ್ರೌಢತೆಯನ್ನು ಪಡೆದಿವೆ. ಅನುಭೂತಿಯ ತೀವ್ರತೆ ಹಾಗು ವ್ಯಾಪಕತೆಯ ಹೊರತಾಗಿ ಅಭಿವ್ಯಂಜನಾ ಪದ್ಧತಿಯಲ್ಲಿಯೂ ಸಹ ಮಾರ್ಮಿಕತೆ ಮತ್ತು ಪರಿಪಕ್ವತೆಯು ಕಂಡು ಬರುತ್ತದೆ. ರೂಪಕಗಳ ಪ್ರಯೋಗವೂ ಸಹ ಅತ್ಯಧಿಕ ವಾಗಿದೆ. ಅಲೌಕಿಕ ರಹಸ್ಯಾನುಭೂತಿಯನ್ನು ಅಭಿವ್ಯಕ್ತ ಮಾಡಲು ಅವರು ಲೌಕಿಕದ ಆಶ್ರಯವನ್ನು ಪಡೆದಿದ್ದಾರೆ. ಲೋಕಗೀತಗಳ ಸ್ವರ ಮತ್ತು ಪಲ್ಲವು ಅವರ ಗೀತ ಪರಂಪರೆ ಯಲ್ಲಿ ಮಹತ್ವಪೂರ್ಣವಾದ ಹೊಸ ಸಾಧನೆಯಾಗಿದೆ. ಒಟ್ಟಿನಲ್ಲಿ 'ದೀಪಶಿಖಾ' ಆಧುನಿಕ ರಹಸ್ಯವಾದೀ ಸಂಪ್ರದಾಯದ ಪ್ರತಿನಿಧಿ ಕಾವ್ಯಸಂಗ್ರಹವಾಗಬಲ್ಲದು ಮತ್ತು ಅದರಲ್ಲಿ 'ಛಾಯಾವಾದೀ' ಕಲೆಯ ಉತ್ಕರ್ಷದ ಕೆಲವೊಂದು ರೂಪವು ಕಂಡುಬರುತ್ತದೆ.

'ದೀಪಶಿಖಾ'ದ ಅನೇಕ ಸ್ಥಳಗಳಲ್ಲಿ (ಗೀತಗಳಲ್ಲಿ) 'ಕರುಣೆ'ಯು ಲಾಲಸೆಯುಕ್ತ ಕುತೂಹಲವು ಕಂಡು ಬರುತ್ತದೆ.

"ಕೇಳದೇ ನೀನು ಕೊಟ್ಟುಬಿಟ್ಟೆ
ಕರುಣೆಯ ಪಾರಾವಾರ ನನಗೆ !
ಚಿರಸುಖ-ದುಃಖದ ದಡಗಳೆರಡನ್ನು ನನಗೆ."

ಅಥವಾ

"ನನ್ನ ನಗೆಯನ್ನು ಕಸಿದುಕೊಂಡು ನಿನ್ನ
ಕರುಣೆಯನು ಜಲಕಣಮಯವಾಡಿ
ತಿರುಗಿ ಕೊಡುತ್ತೀ ನನಗೆ ಅಶ್ರುವನ್ನು ನೀನು
ಸ್ಮಿತದ ಬಣ್ಣಗಳಿಂದ ತುಂಬಿ."

ಕವಯಿತ್ರಿಯು ಪ್ರಕೃತಿಯೊಡನೆ ತಾದಾತ್ಮ್ಯ ಸ್ಥಾಪಿಸಿದ್ದನ್ನು ಕೆಳಗಿನ ಗೀತದಲ್ಲಿ ಕಾಣಬಹುದು-

"ರಾತಸೀ ನೀರವ ವ್ಯಥಾ ತಮಸೀ ಅಗಮ
ತೇರೀ ಕಹಾನಿ."

ಅಂದರೆ- "ರಾತ್ರಿಯಂತೆ ನೀರವ ವ್ಯಥೆ ತಮದಂತೆ ಅಗಮ್ಯ ನಿನ್ನ ಕಥೆ." ಇದೇ ಪ್ರಕಾರವಾಗಿ "ಕಣ್ಣೀರಿನ ದೇಶದಲ್ಲಿ" (ಆಂಸ್ತುವೊಂಕೇ ದೇಶಮೇ") ಎಂಬ ಶೀರ್ಷಿಕೆಯ ಗೀತದಲ್ಲಿ 'ಉದುರುತ್ತಿರುವ ಹೂ', 'ನಿಶ್ಚಲ ತೃಣ', 'ನಿಶ್ಚಿಂತ ಕೋಗಿಲೆ', ಮತ್ತು 'ತೃಷಿತ ಚಾತಕ' ಮುಂತಾದವು ತಮ್ಮ ಮಧುರ ಮತ್ತು ಮಾನಸಿಕ ಸ್ಥಿತಿಯಿಂದ ತಮ್ಮ ಜೀವನದ ವ್ಯಥೆಯ ಸ್ವಪ್ನ-ಸಂಕೇತವನ್ನು ಮಾಡುತ್ತವೆ.

ಅಂಥ ವ್ಯಥೆಯ ಸಂಕೇತವನ್ನು ದಿವಸವೂ ತನ್ನ ಚಿರ ಸಂದೇಶದಲ್ಲಿಯೂ ಸಹ ವ್ಯಕ್ತಮಾಡಲಾರದೇ ಹೋಯಿತು.

ಮಹಾದೇವಿಯವರ ಪ್ರಕೃತಿ ಚಿತ್ರಗಳಲ್ಲಿ ಅವರ ಭಾವಗಳ ಪ್ರತಿಬಿಂಬಗಳೇ ಹೆಚ್ಚು. ಆದರೆ, ಕೆಲವು ಕಡೆ ಸ್ವತಂತ್ರ ದೃಶ್ಯ ಚಿತ್ರಣವನ್ನೂ ಅವರು ಮಾಡಿದ್ದುಂಟು. "ಹಿಮಾಲಯ"ದ ನಿಮ್ನಾಂಕಿತ ಚಿತ್ರಣದಲ್ಲಿ ರೂಪ-ಸೌಂದರ್ಯ ಹಾಗೂ ವರ್ಣಗಳ ಸಜೀವತೆಯು ಬಹು ರಮ್ಯವಾಗಿ, ಪ್ರಭಾವ ಪೂರ್ಣವಾಗಿ ಮತ್ತು ರಸಮಯವಾಗಿದ್ದನ್ನು ಕಾಣಬಹುದು-

"ನೀನು ಪೃಥ್ವಿಯ ಪ್ರಾಣಗಳ ಶತದಲ
ಸಿತಕ್ಷೀರಕೆನೆ ಹೀರಕ ರಜದಿಂದ
... ... ... ... ...
ಹರಡಿವೆ ತಿಮಿರದಂತೆ ಕೆಲವು ತೂಲ ವಿರಲ,
ಹಾರಾಡುತ್ತವೆ ಶತ–ಶತ ಭ್ರಮರರೂಪೀ
ಮೋಡಗಳು."

'ನೀಹಾರ'ದಿಂದ 'ದೀಪಶಿಖಾ'ದ ವರೆಗೆ ಸಂಪೂರ್ಣ ಐದು ಕಾವ್ಯ ಗ್ರಂಥಗಳಲ್ಲಿ ಮಹಾದೇವಿಯವರು ಸಹಜ ಔತ್ಸುಕ್ಯದ ರಹಸ್ಯದಿಂದ ಊರ್ಜಿತಾವಸ್ಥೆಗೆ ಏರುತ್ತಾ ಕೊನೆಯ ಘಟ್ಟವನ್ನು ಮುಟ್ಟಿ ದೃಢವಿಶ್ವಾಸದಿಂದ ಹೀಗೆ ಹೇಳುತ್ತಾರೆ– "ನನಗಾಗಿ ಶೂಲಗಳಾದವು ಅಕ್ಷತ, ಧೂಳಿ ಚಂದನ." ಅಥವಾ ಅಶ್ರು-ಹಾಸದ ಸಮಾನ ಮಹತ್ವ ವನ್ನು ಅವರು ಸ್ವೀಕರಿಸುತ್ತಾರೆ–

"ಒಂದೇ ಹೃದಯದಲ್ಲಿ ಬೆಳೆದವು, ಒಂದೇ
ಮಾರ್ಗದಿಂದ ಎರಡೂ ಸಾಗಿವೆ,
ರೆಪ್ಪೆಗಳೆಂಬ ಪುಲಿನಗಳ ಮೇಲೆ, ಅಧರ-ಉಪಕೂಲದ
ಮೇಲೆ ಎರಡೂ ಅರಳಿವೆ.
ಒಂದೇ ಝುಂಕಾರದಲ್ಲಿ ಯುಗ ಅಶ್ರು, ಹಾಸವನ್ನು
ಮೇಳವಿಸಿದ್ದೇನೆ."

'ದೀಪಶಿಖಾ'ದಲ್ಲಿ "ಗೋಧೂಲೀ ಅಬ ದೀಪ ಜಲಾಲೇ" ಎಂಬ ಗೀತದಲ್ಲಿ ಸಂಧ್ಯಾ-ಸೌಂದರ್ಯದೊಳಗಿಂದ ಏಳುತ್ತಿರುವ 'ರಜನಿಯ' ಸ್ವಾಗತವು ಬಹು ಮಾದಕ ಹಾಗೂ ರಸಮಯವಾಗಿದೆ.

ಪ್ರಕೃತಿಯ ಸೌಂದರ್ಯದ ವಿಷಯವಾಗಿ ಅವರ ಆಕರ್ಷಣೆಯು ರಹಸ್ಯವಾದದ ಉತ್ಕರ್ಷದ ಪರಿಣಾಮವಾಗಿ ಬದಲಾದಂತೆ ಕಂಡರೂ ಅದು ಲುಪ್ತವಾಗಿಲ್ಲ. ಯಾವುದನ್ನು ಮಹಾದೇವಿಯವರು ಮೊದಲು ಚಿತ್ರಗಳ ಮುಖಾಂತರ ವ್ಯಕ್ತಮಾಡುತ್ತಿದ್ದರೋ ಅದನ್ನು 'ದೀಪಶಿಖಾ'ದಲ್ಲಿ ಪ್ರತೀಕಗಳ ಹಾಗೂ ವಿರೋಧಾಭಾಸಗಳ ಮಾಧ್ಯಮದಿಂದ ಹೇಳಿದ್ದಾರೆ. ಪ್ರಕೃತಿಯೊಡನೆ ಅವರ ಸಂಬಂಧವು ಇಂದಿಗೂ ಉಳಿದಿದೆ. ಈಗ ಅವರು ಪ್ರಕೃತಿಯ ಸೌಂದರ್ಯದ ಚಿತ್ರಗಳನ್ನು ಚಿತ್ರಿಸದೇ ಮಾನವನ ಸುಂದರ ರೂಪದಲ್ಲಿ ಪ್ರಕೃತಿಯ ರೂಪವನ್ನು ಅದು ಕರುಣೆಯ ರೂಪವೇ ಯಾಕಾಗಲೊಲ್ಲದು ಚಿತ್ರಿಸುತ್ತಿದ್ದಾರೆ. ಸುಖ-ದುಃಖದ

ಸಾಮಂಜಸ್ಯದಲ್ಲಿಯೇ ಅವರಿಗೆ ವಿಶ್ವಾಸವಿರುವದರಿಂದ ಕರುಣೆಗೆ ಒಂದು ಪ್ರಕಾರದ ಅಭಿರಾಮವು ಪ್ರಾಪ್ತವಾಗಲು ಸಾಧ್ಯವಾಗಿದೆ. ನಿಜವಾಗಿ ಹೇಳಬೇಕೆಂದರೆ ಮಹಾದೇವಿಯವರ ಸಮಸ್ತ ಸೌಂದರ್ಯನಿಧಿಯು ಅದೇ ಅಜ್ಞಾತ ಪ್ರಿಯತಮನದೇ ಆರಾಧನೆಯಲ್ಲಿ ಸಮರ್ಪಿತವಾಗಿದೆಯಲ್ಲದೇ ಹೃದಯದ ಎಲ್ಲ ಭಾವಸಂಪತ್ತನ್ನೂ ಸಹ ಅವನಿಗೆ ಮಾತ್ರ ಸಮರ್ಪಿಸಿದ್ದಾರೆ. ಮತ್ತು ಯಾವದು ಅವನಿಗೆ ಸಮರ್ಪಿಸಲ್ಪಟ್ಟಿದೆಯೋ ಅದು ಸುಂದರವೇ ಆಗುತ್ತದೆ. ಆದ್ದರಿಂದ ಮಹಾದೇವಿಯವರ ಉಕ್ತಿಗಳಲ್ಲಿ ಅನುಭೂತಿಯ ವ್ಯತ್ಯಾಸ ಕಂಡು ಬಂದರೂ ಕೂಡ ಸೌಂದರ್ಯದಲ್ಲಿ ಮಾತ್ರ ಅಂತರವಾಗಲೀ, ಅಥವಾ ವ್ಯತ್ಯಾಸವಾಗಲೀ ಎಂದೂ ಆಗಲಾರದು. ಅವನ ಐಶ್ವರ್ಯದಿಂದಲೇ ಪ್ರಕೃತಿಯು ಐಶ್ವರ್ಯಮಯವಾಗಿ ಕಾಣುತ್ತದೆ. ಈ ಮೊದಲೇ ಉಲ್ಲೇಖಿಸಿದ "ಹಿಮಾಲಯದ" ಗೀತದ ಪ್ರಕೃತಿ ವರ್ಣನೆ ನೋಡಬಹುದು.

ಪ್ರೇಮ, ವಿರಹವೇದನೆ, ಪ್ರೇಮಾನುಭೂತಿ, ಪ್ರೇಮಬೋಧ ಮುಂತಾದವುಗಳನ್ನು 'ಬಾಣ'ದ ಮುಖಾಂತರ ವ್ಯಕ್ತಮಾಡಲಾಗಿದೆ. ಉದಾಹರಣಾರ್ಥವಾಗಿ 'ದೀಪಶಿಖಾ'ದ ಕೆಳಗಿನ ಪಂಕ್ತಿಗಳನ್ನು ನೋಡಬಹುದು—

"ಭೇದಿಸಿತು ಇಂದು ತಿಳಿಯದೇ ಯಾರ
ಮೃದುಕಠಿಣಬಾಣ"

* * * * * * * *

"ಸ್ವರ್ಣಶರದಿಂದ ಅಭಿಲಾಷೆಯು ಮೇಘವು-
ಹೃದಯುವನ್ನು ಭೇದಿಸಿತು."

'ದೀಪಕ'ದೊಡನೆ 'ದೀಪಕರಾಗ'ದ ಸಂಬಂಧವುಂಟು. ದೀಪಕರಾಗವನ್ನು ಹಾಡಿದರೆ ಆರಿದ ದೀಪಗಳು ಹತ್ತುತ್ತವೆ ಎಂದು ಪ್ರತೀತಿಯುಂಟು. ಅಂದಮೇಲೆ ದೀಪಕರಾಗದ ಲಾಕ್ಷಣಿಕ ಅರ್ಥ 'ಸ್ನೇಹ' ಮತ್ತು 'ಜ್ವಾಲೆ' ಎಂದಾಯಿತು. ಸ್ನೇಹದ ಅರ್ಥ 'ಪ್ರೇಮ' ಹಾಗೂ 'ಜ್ವಾಲೆ'ಯ ಅರ್ಥ ಪ್ರಕಾಶ. ದೀಪಕರಾಗದ ಉಲ್ಲೇಕವನ್ನು 'ದೀಪಶಿಖಾ'ದಲ್ಲಿ ಅನೇಕ ಸಲ ಮಾಡಿದ್ದುಂಟು—

"ಪ್ರಿಯನನ್ನು ಗುರುತಿಸಲಾರದಿದ್ದರೆ
ಏಕೆ ಪ್ರತಿ ಉಸಿರಿನಲ್ಲಿ ನಾನು ಸಜಲ ದೀಪಕರಾಗ
ಹಾಡುತ್ತಿದ್ದೆ ?"
"ಎಲ್ಲ ಶಾಂತವಾದ ದೀಪಗಳನ್ನು ಹಚ್ಚುವೆ.
ತಮವು ಆವರಿಸುತ್ತದೆ, ಇಂದು ನನ್ನ
ದೀಪಕರಾಗವನ್ನು ಎಬ್ಬಿಸುವೆ.
ಈ ಮೃತ್ಯುವಿನ ಪರ್ವದಲ್ಲಿ ನಾನಿಂದು
ದೀಪೋತ್ಸವ ಆಚರಿಸುವೆ."

ಈ ಪ್ರಕಾರವಾಗಿ 'ದೀಪಶಿಖಾ'ದಲ್ಲಿ 'ಸಾಧನೆ'ಯ ಪ್ರಾರಂಭದಿಂದ ಹಿಡಿದು 'ಸಿದ್ಧಿ'ಯನ್ನು ಪಡೆಯುವವರೆಗಿನ ಎಲ್ಲ ಸ್ಥಿತಿಗಳು ಕಂಡುಬರುತ್ತವೆ.

'ದೀಪಶಿಖಾ'ದಷ್ಟೇ 'ದೀಪಶಿಖಾದ ಭೂಮಿಕೆ'ಯೂ ಅತ್ಯಂತ ಮಹತ್ವಪೂರ್ಣವಾಗಿದೆ. ಆಧುನಿಕ ತಥಾಕಥಿತ ಪ್ರಗತಿಶೀಲ ಅಥವಾ ಸಮಾಜವಾದೀ ವಿಮರ್ಶೆಯ ಆಂದೋಲನದಲ್ಲಿ 'ಛಾಯಾವಾದ'ದ ಭವ್ಯ–ದಿವ್ಯ ವ್ಯಾಖ್ಯೆಯನ್ನು ಮಾಡಲಾಗಿದೆ. ಅದರ ಸ್ಥಾನವು ಹಿಂದಿಯ ವಿಮರ್ಶಾ ಸಾಹಿತ್ಯದ ಇತಿಹಾಸದಲ್ಲಿ ಅಜರಾಮರವಾಗಿ ಉಳಿಯುವದು.

## ೫. ಮಹಾದೇವಿಯವರ ಕಾವ್ಯಸ್ವರೂಪ ಹಾಗೂ ವೈಶಿಷ್ಟ್ಯ

ಮಹಾದೇವಿಯವರ ಗೀತೆಗಳೆಂದರೆ ಅವರ ಆತ್ಮ ನಿವೇದನೆ ಮಾತ್ರ. ಅವು ಅವರ ಅಕಿಂಚನ ಹೃದಯದ ಕಾಣಿಕೆಯ ಹೊರತಾಗಿ ಮತ್ತೆ ಬೇರೇನೂ ಅಲ್ಲ.

ಇವರ ಕಾವ್ಯದಲ್ಲಿ ಕರುಣರಸದ ಅಪಾರಸಾಗರವು ಭೋರ್ಗರೆಯುತ್ತಿರುತ್ತದೆ. ದುಃಖ ಮತ್ತು ವೇದನೆಯೇ ಅವರ ಕಾವ್ಯದ ಮುಖ್ಯ ವಸ್ತುಗಳಾಗಿವೆ ಮತ್ತು ಅವೇ ಅವರ ಕಾವ್ಯಾತ್ಮಗಳಾಗಿವೆ.

'ದುಃಖವಾದ'ದ ಮೂಲದಲ್ಲಿ ಆಧ್ಯಾತ್ಮಿಕ ಅಸಂತೋಷ, ಮತ್ತು ರಾಜಕೀಯ ಕಾರಣಗಳುಂಟು. ದುಃಖವಾದ ಮತ್ತು ಪಲಾಯನವಾದ ಸಂಯೋಗದಿಂದ

'ಛಾಯಾವಾದ'ವು ಪ್ರಾರಂಭವಾಯಿತು. ಭಾರತೀಯ ಜನ ಜೀವನವು ಆಧ್ಯಾತ್ಮಿಕ ತತ್ವವನ್ನು ಮರೆತು ಪಾರತಂತ್ರ್ಯ ದಲ್ಲಿ ಅಸಹಾಯಕವಾಗಿತ್ತು. ಆ ಅಸಹಾಯಕ ಸ್ಥಿತಿಯಲ್ಲಿ ನವಜಾಗೃತಿಯನ್ನುಂಟು ಮಾಡಲು ಅಂದರೆ, ಜೀವನದ ದಯನೀಯ ಸ್ಥಿತಿಯ ಬಗ್ಗೆ ಕಣ್ಣೀರು ಸುರಿಸಲು ಈ ದುಃಖವಾದದ ಜನ್ಮವಾಯಿತು. 'ಬುದ್ಧಿವಾದ'ವು ಹೆಚ್ಚೆಚ್ಚು ಪ್ರಸಾರವಾದಂತೆಯೇ ಈ ದುಃಖವಾದದೊಳಗಿಂದ ಹೊರಟು 'ಛಾಯಾವಾದ'ವು ಸ್ಥೂಲರೂಪವನ್ನು ಧರಿಸಲಾರಂಭಿಸಿತು.

ಮಹಾದೇವಿಯವರ ಕಾವ್ಯದಲ್ಲಿ ಒಂದು ಕಡೆ ಆ 'ಅಸೀಮ' ಅಜ್ಞಾತ ನಿರ್ಗುಣಬ್ರಹ್ಮನೊಡನೆ ಮಿಲನದ ಉತ್ಕಟ ಇಚ್ಛೆ, ಮತ್ತೊಂದೆಡೆಗೆ ಆ 'ಅಸೀಮ'ನೊಡನೆ ಮಿಲನದ ಕಾಲ್ಪನಿಕ ಸುಖವೂ ಕೂಡ ಉಂಟು. ನಿಜ ವಾಗಿಯೂ 'ಅಸೀಮ'ವು ಆಕಾಂಕ್ಷೆಯ ವಿಷಯವಾಗಿದೆ–

"ಎಂದು ಅಸೀಮನೊಡನೆ ನನ್ನ
ಮಿಲನಯಾಗುವದೋ
'ಅಮೃತತ್ವ'ವು ಅವಸಾನದ ಕ್ರೀಡೆ ಆಡುವದನ್ನು,
ಹೇ ದೇವ ! ನೀನು ನೋಡುವಿ."
"ಅನಂತ ಪಥದಲ್ಲಿ ನಾನು ಯಾವ
ಸಸ್ಮಿತ ಸ್ವಪ್ನಗಳ ಸಂಗತಿಗಳನ್ನು
ಬರೆಯುತ್ತೇನೆಯೋ, ಅವುಗಳನ್ನು
ರಾತ್ರಿಯು ತನ್ನ ಅಶ್ರುಜಲದಿಂದ ಎಂದೂ
ತೊಡೆದು ಹಾಕಲಾರದು."

ಅವರು ತಮ್ಮ "ಜೀವನ ಲೀಲೆ"ಯನ್ನು ಸಮಾಪ್ತಗೊಳಿಸುವ ವರದಾನವನ್ನು ಬಯಸುತ್ತಾರೆ. ಇದೇ ಆಕಾಂಕ್ಷೆಯನ್ನು ಮಹಾದೇವಿಯವರು ಕೆಳಗಿನ ಪಂಕ್ತಿಗಳಲ್ಲಿ ವ್ಯಕ್ತಮಾಡಿದ್ದಾರೆ-

"ದ್ರುತ ರೆಕ್ಕೆಗಳುಳ್ಳ ಮನಸ್ಸಿಗಾಗಿ
ನೀನು ಅನಂತ ಆಕಾಶವಾಗಬೇಕು."

ಹಾಗೂ

ಸ್ವಚ್ಛಂದವಾಗಿ ವಿಹರಿಸುತ್ತಾ ಸಮಾಪ್ತನಾಗುವೆ,
ಆದರೆ, ಪಂಥದ ಸೀಮೆಯನ್ನು ಮಾತ್ರ
ಹೊಂದಲಾರೆ."

ಆ "ಅಸೀಮ" ನನ್ನು ಸ್ಪಷ್ಟವಾಗಿ ಕಾಣಲು ಅಸಮರ್ಥನಾಗಿದ್ದರೂ ಅವನ ಅಸ್ಪಷ್ಟ ರೂಪವು ಮಾತ್ರ ಗೋಚರಿಸುತ್ತದೆ. ಇದನ್ನೇ ಕವಯಿತ್ರಿಯವರು ಪ್ರತೀಕ ಸಂಕೇತಗಳ ಮುಖಾಂತರ ಪ್ರಿಯತಮನು ಆವರಣದಲ್ಲಿ ಬರುತ್ತಾನೆಂದು ಹೇಳುತ್ತಾರೆ—

"ರಜತ ರಶ್ಮಿಗಳ ಛಾಯೆಯಲ್ಲಿ
ಬಾಷ್ಪಯುತವಾದ ಮೇಘನಂತೆ ಅವನು ಬರುತ್ತಾನೆ."

ಅಥವಾ

"ಅಂಧಕಾರದ ಆವರಣದಲ್ಲಿ ಬರುವದು
ನನ್ನ ಪ್ರಿಯತಮನಿಗೆ ಬಲು ಇಷ್ಟ."

ಮುಂದುವರಿದು ಮಹಾದೇವಿಯವರು ಈ 'ಪ್ರಿಯತಮನು' ಸ್ವಪ್ನವಾಗಿ ಬಂದು ಜಾಗೃತಿಯಲ್ಲಿ ವಿಲೀನನಾಗುತ್ತಾನೆಂದು ಹೇಳುತ್ತಾರೆ—

"ಅವನು ಸ್ವಪ್ನವಾಗಿ ಬಂದು
ಜಾಗೃತಾವಸ್ಥೆಗೆ ಮರಳುತ್ತಾನೆ."

ಮಹಾದೇವಿ ವರ್ಮಾ ಅವರ ಸಾಹಿತ್ಯದಲ್ಲಿ ದಾರ್ಶನಿಕ ಚಿಂತನೆ, ಸ್ತ್ರೀ ಸುಲಭ ಭಾವನೆಗಳ ಕೋಮಲತೆ, ಸಾಹಿತ್ಯಿಕ ಪರಂಪರೆಗಳಿಂದ ಲಬ್ಧವಾದ ಸಹಾನುಭೂತಿ, ಛಾಯಾವಾದದ ಚಮತ್ಕೃತವಾದ ಚಿತ್ರಣ, ತತ್ಸಮ ಶಬ್ದಗಳ ಮೃದು ಮಧುರ ಝುಂಕಾರ ಮತ್ತು ಪ್ರಕೃತಿಯ ವರ್ಣರಂಜಿತ ಚಿತ್ರಣ ಮುಂತಾದವುಗಳನ್ನು ಬಹು ಸುಂದರವಾಗಿ, ಅರ್ಥವತ್ತಾಗಿ ನಿರೂಪಿಸಲಾಗಿದೆ.

ಮಹಾದೇವಿಯವರದು ಸ್ವತಂತ್ರವಾದ ವ್ಯಕ್ತಿತ್ವ. ಅವರು ಯಾವದೇ ಕವಿ ವಿಶೇಷನಿಂದ ಪ್ರಭಾವಿತರಾಗಿ, ಅವನನ್ನೇ ಅನುಸರಿಸಿ, ಅನುಸರಿಸಿಕೊಂಡು ಮತ್ತು ಅವಲಂಬಿಸಿಕೊಂಡು ಹೋಗಿಲ್ಲ. ಅವರದೇ ಆದ ಸ್ವತಂತ್ರ ಪ್ರವಾಹವಿದೆ, ಶೈಲಿ ಇದೆ, ವಿಚಾರ ಹಾಗೂ ಕಲ್ಪನೆಗಳಿವೆ. ಇವರು 'ಆತ್ಮ'ವನ್ನು 'ಪ್ರೋಷಿತ ಪತಿಕಾ' ಎಂಬ ಶ್ರೇಣಿಯಲ್ಲಿಟ್ಟಿದ್ದಾರೆ.

"ಜೀವನವು ವಿರಹದ ಕಮಲ, ವಿರಹದ ಕಮಲ
ವೇದನೆಯಲ್ಲಿಯೇ ಜನ್ಮ,
ಕರುಣೆಯಲ್ಲಿ ನಿಹಿತ ಆವಾಸ"
—"ನೀರಜಾ"

ಪ್ರಕೃತಿಯನ್ನು ಪರಮಾತ್ಮನೊಡನೆ ಒಂದುಗೂಡಿಸುವ ಪ್ರವಾಹವೆಂದರೆ 'ವಿರಹ'ವೇ. ಆತ್ಮವು ಈ ದುಃಖವೆಂಬ ಸರೋವರದಲ್ಲಿ ಹುಟ್ಟಿದ ಕಮಲವಾಗಿರುತ್ತದೆ. ಮಾನವ ಜನ್ಮದ ಉತ್ಪತ್ತಿಯ ಕಾರಣವೂ ಈ ದುಃಖವೇ. ಆತ್ಮವು ನಿರ್ವಿಕಾರ ಮತ್ತು ನಿಷ್ಕಾಮವಾಗಿರುತ್ತದೆ. ಆತ್ಮನಿಗೆ ಪ್ರತಿಯೊಂದು ವಸ್ತುವಿನ ಜ್ಞಾನವಿರುತ್ತದೆ. ಮತ್ತು ಜ್ಞಾನೋದಯವುಂಟಾದೊಡನೆಯೇ ಅದರಲ್ಲಿ ವಿರಕ್ತಿ ಅಥವಾ ವೈರಾಗ್ಯದ ಭಾವನೆಯುಂಟಾಗುತ್ತದೆ. ಅವ್ಯಕ್ತದ (ಪರಮಾತ್ಮನ) ದರ್ಶನವಾಗುತ್ತಲೇ ಆತ್ಮವು ಸಾಂಸಾರಿಕ ಬಂಧನಗಳಿಂದ ಮುಕ್ತಿಯನ್ನು ಪಡೆದು ಅಲೌಕಿಕ ಆನಂದದೆಡೆಗೆ ಸಾಗುತ್ತದೆ.

ಉರಿಯುತ್ತಿರುವ ಜ್ಯೋತಿಯನ್ನು ಆತ್ಮದ ಪ್ರತೀಕ ಅಥವಾ ಪ್ರತಿಬಿಂಬ ಎಂದು ಭಾವಿಸಿ ಹೀಗೆ ಹೇಳುತ್ತಾರೆ—

೧) "ಮೇಣದಂತಿರುವ ದೇಹವು ಕರಗಿಹೋಗಿದೆ
ದೀಪದಂತಿರುವ ಮನಸ್ಸು ಉರಿದು ಭಸ್ಮವಾಗಿದೆ."

೨) "ನೀನು ಉರಿದು ಉರಿದು ಎಷ್ಟೊಂದು ಕ್ಷೀಣವಾಗುತ್ತೀ
ಮಧುರ ಮಿಲನದಲ್ಲಿ ಲಯವಾಗುತ್ತೀ."

೭) "ಮಧುರ ಮಧುರವಾದ ನನ್ನ ಜ್ಯೋತಿಯೇ ಉರಿ
ಪ್ರತಿಯುಗ, ಪ್ರತಿಕ್ಷಣ, ಪ್ರತಿದಿನ
ಪ್ರಿಯಕರನ ಪಥವನ್ನು ಬೆಳಗಿಸು."

—"ನೀರಜಾ"

ಅಂಧಕಾರ ಮತ್ತು ಪ್ರಕಾಶ ಕ್ರಮವಾಗಿ ಅಜ್ಞಾನ ಮತ್ತು ಜ್ಞಾನದ ಪ್ರತೀಕಗಳು. ವಿರಹಸಾಧನೆಯಿಂದ ಇವೆರಡರ ಭೇದವು ಇಲ್ಲದಂತಾಗುತ್ತದೆ. ಚೇತನವು ಬಳಲಿದಾಗ, ದೇಹವು ಯಾವಾಗ್ಗೆ ಮೇಣದಂತೆ ಕರಗುವದೋ ಆಗ ಜೀವಾತ್ಮವು ಪರಮಾತ್ಮನ ಸಾಕ್ಷಾತ್ಕಾರವನ್ನು ಪಡೆಯುವದು. ಹಾಗೂ ಕಗ್ಗತ್ತಲೆಯು ಪ್ರಕಾಶದಲ್ಲಿ, ಪ್ರಕಾಶವು ಕಗ್ಗತ್ತಲೆಯಲ್ಲಿ ಲಯವಾಗುವದು.

ಮಹಾದೇವಿ ವರ್ಮಾ ಅವರು ಸುಮಧುರವಾದ ಹಾಗೂ ಸುಂದರ ಭಾವಗೀತೆಗಳಲ್ಲಿ, ಕಲಾತ್ಮಕ ಛಂದಸ್ಸುಗಳಲ್ಲಿ ಹೊಸ ಪ್ರತೀಕ ಅಥವಾ ಪ್ರತಿಮೆಗಳ ಮುಖಾಂತರ ಯಾವ ಪ್ರವಾಹವನ್ನು ಹರಿಸಿದ್ದಾರೆಯೋ ಅದು ಎಲ್ಲ ರೀತಿಯಿಂದ ತನ್ನತನವನ್ನು ಒಳಗೊಂಡಿದೆ. ಇವರ ಪ್ರತಿಯೊಂದು ವಿಚಾರವೂ ಭಾರತೀಯತ್ವವನ್ನು ಪ್ರತಿಪಾದಿಸುತ್ತವೆಯಷ್ಟೇ ಅಲ್ಲದೆ ಪ್ರಾಚೀನ ಸಂಸ್ಕೃತಿಯ ಒಳ್ಳೆಯ ಪ್ರಭಾವವು ಇವರ ಮೇಲೆ ಉಂಟಾದದ್ದು ಕಂಡು ಬರುತ್ತದೆ.

ಕೊನೆಗೆ ಮಹಾದೇವಿಯವರು ತಮ್ಮ ಆ ಅಜ್ಞಾತ ಪರಬ್ರಹ್ಮ ಪರಮಾತ್ಮನನ್ನು ಅಭಿನಂದಿಸಿ ಆತ್ಮಸಂತೋಷವನ್ನು ಪಡೆಯುತ್ತಾರೆ—

"ಏನು ಪೂಜೆ ಏನು ಅರ್ಚನೆ ?
ಆ ಅಸೀಮನ ಸುಂದರ ದೇಗುಲ ನನ್ನ
ಲಘುತಮ ಜೀವನ !
ನನ್ನ ಉಸಿರುಗಳು ನಿತ್ಯ ಪ್ರತಿ ಪ್ರಿಯತಮನಿಗೆ
ಅಭಿನಂದಿಸುತ್ತಿರುತ್ತಿವೆ!"

ವೇದನೆಯ ವೀಣಾಪಾಣಿ ಮಹಾದೇವಿ ವರ್ಮಾ ಅವರನ್ನು 'ಆಧುನಿಕ ಮೀರಾ' ಎಂದು ಸಂಬೋಧಿಸಿ ಭಕ್ತ ಮೀರಾಳೊಡನೆ ಹೋಲಿಸುವ ಸಂಪ್ರದಾಯವುಂಟು. ಆದರೆ ಈ ಹೋಲಿಕೆ ವಿಮರ್ಶಕರ, ಮಹಾದೇವಿಯವರ ಅಭಿಮಾನಿಗಳ, ಪ್ರೇಮಿಗಳ ದೃಷ್ಟಿಯಲ್ಲಿ ಉಚಿತವೆಂದನಿಸಿದರೂ ಸ್ವತಃ ಮಹಾದೇವಿಯವರು ಇದನ್ನು ಒಪ್ಪಲು ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸಿದ್ದುಂಟು.

## ೬. ಮೀರಾ ಮತ್ತು ಮಹಾದೇವಿ ವರ್ಮಾ

'ಮೀರಾ' ಮತ್ತು ಮಹಾದೇವಿ ಹಿಂದೀ ಸಾಹಿತ್ಯದ ಬೇರೆ ಬೇರೆ ಯುಗಗಳ ಇಬ್ಬರು ಕೀರ್ತಿಶಾಲಿಗಳಾದ ಮಹಾಕವಯಿತ್ರಿಯರು. ಈ ಇಬ್ಬರೂ ಕವಯಿತ್ರಿಯರ ಕಾವ್ಯಗಳ ಮೂಲ ಪ್ರೇರಣೆ ಒಂದೇ ಆಗಿದ್ದರೂ ಎರಡು ಭಿನ್ನ ಭಿನ್ನ ಯುಗಗಳ ಬೇರೆ ಬೇರೆ ಪರಿಸ್ಥಿತಿಯಲ್ಲಿ ಇದ್ದುದರ ಪರಿಣಾಮವಾಗಿ ಅವರಿಬ್ಬರ 'ಕವಿ ವ್ಯಕ್ತಿತ್ವ' ಮಾತ್ರ ಬೇರೆ ಬೇರೆಯಾಗಿದೆ.

ಮಹಾದೇವಿ ನಿರ್ಗುಣಬ್ರಹ್ಮನ ಆರಾಧಿಕೆ. ದೇಶ-ಕಾಲಗತ ಪ್ರಭಾವವೇ ಇವಕ್ಕೆ ಕಾರಣ. ತತ್‌ಕಾಲೀನ ಚಿಂತನಧಾರೆಯ ಮೇಲೆ ಸ್ವಾಮೀ ವಿವೇಕಾನಂದ ಹಾಗು ರಾಮಕೃಷ್ಣ ಪರಮಹಂಸರ ಆಧ್ಯಾತ್ಮದ ಕಾರಣ ದೇಶದ ಚಿಂತನ ಧಾರೆಯ ಮೇಲೆ 'ಅದ್ವೈತ'ವಾದದ ಪ್ರಭಾವವುಂಟಾಗಿ ಅದರಿಂದ 'ಛಾಯಾವಾದ ಯುಗ'ವು ಪ್ರಾರಂಭವಾಯಿತು. ಮಹಾದೇವಿಯವರ ಕವಿತೆಗಳಲ್ಲಿಯೂ ಸಹ ಅದೇ ದಾರ್ಶನಿಕ ಚಿಂತನದ ಬ್ರಹ್ಮನು (ನಿರ್ಗುಣ ಬ್ರಹ್ಮ) ಅವರ ಭಾವಗಳ ಆಲಂಬನವಾದನು ಮತ್ತು ಅವನೊಡನೆ (ಅಜ್ಞಾತ ಪ್ರಿಯತಮನೊಡನೆ) ಯುಗ - ಯುಗಗಳ ಸಂಬಂಧವನ್ನು ಸ್ಥಾಪಿಸಿ ತಮ್ಮ ಕರುಣ ಮಾಧುರ್ಯ ಭಾವವನ್ನು ಕಾವ್ಯದ ಮುಖಾಂತರ ಅರ್ಪಿಸಿದ್ದಾರೆ—

ಮಹಾದೇವಿಯವರು ತಮ್ಮ ಪ್ರೇಮವನ್ನು ತತ್ವ ಜ್ಞಾನದ ಶಬ್ದಗಳಲ್ಲಿ ವ್ಯಕ್ತಮಾಡಿದ್ದಾರೆ. ಅಸೀಮ ಹಾಗು ಸಸೀಮ ಎಂಬ ಶಬ್ದಗಳ ಮುಖಾಂತರ ತಮ್ಮ ಸಂಬಂಧವನ್ನು ಆ ಮಧುರತಮ ವ್ಯಕ್ತಿತ್ವ (ಅಜ್ಞಾತಪ್ರಿಯ) ದೊಡನೆ ಜೋಡಿಸುತ್ತಾರೆ.

ಮೀರಾಳ ರತಿಭಾವದಲ್ಲಿ ಮುಚ್ಚು-ಮರೆ ಇಲ್ಲ. ಅವಳ ಭಗವದ್ಭಕ್ತಿ ನಿಶ್ಚಿತವಾಗಿಯೂ 'ಕಾಂತಾಸಕ್ತಿ'ಯೇ ಆಗಿರುತ್ತದೆ. ಮೀರಾ ಮುಕ್ತ ಹೃದಯದಿಂದ ತನ್ನ ಪ್ರೇಮವನ್ನು 'ಗಿರಿಧರ ಗೋಪಾಲ'ನ ಬಗ್ಗೆ ವ್ಯಕ್ತ ಮಾಡುತ್ತಾಳೆ. ಅವಳು

ಅವನ ಪ್ರೇಮದಲ್ಲಿ ಹುಚ್ಚಿಯಾಗಿ ವನ-ವನ, ನಗರ-ನಗರದಲ್ಲಿ ಅವನನ್ನು ಹುಡುಕುತ್ತಾ ತಿರುಗುತ್ತಾಳೆ. ಅವಳು ತನ್ನ ಪ್ರೇಮದ ಮುಂದೆ ಲೋಕ ಮರ್ಯಾದೆ ಹಾಗು ಕುಲ-ಸಮಾಜವನ್ನು ಲೆಕ್ಕಿಸುವದಿಲ್ಲ.

ಮೀರಾಳ ಪ್ರೇಮಭಾವವು ಕುದಿಯುತ್ತಿರುವ ಹಾಲಿನಂತೆ ಉಕ್ಕಿ ಬೀಳುತ್ತದೆ. ಮೀರಾಳ ಈ ಆಕುಲ ತನ್ಮಯತೆಯ ಮೇಲೆ ಚೈತನ್ಯ ಮಹಾಪ್ರಭುಗಳ ಕೀರ್ತನ ಪ್ರಣಾಲಿ (ಪದ್ಧತಿ)ಯ ಪ್ರಭಾವಬಿದ್ದಿರುತ್ತದೆ.

ಮೀರಾಳ ತನ್ಮಯತೆ, ಪ್ರಜ್ಞಾಶೂನ್ಯತೆ (ತನ್ನನ್ನು ತಾನೇ ಮರೆಯುವದು) ಮತ್ತು ನಿರಾವರಣ ಪ್ರೇಮವು ಮಹಾದೇವಿಯಲ್ಲಿ ಕಂಡು ಬರಲಾರದು. ಅದಕ್ಕೆ ಪ್ರತಿಕೂಲ ಯುಗವೇ ಕಾರಣ. ಮಹಾದೇವಿಯವರು ಸಹ 'ಛಾಯಾವಾದೀ ಯುಗ'ದ ಪ್ರಭಾವದಿಂದ ತಮ್ಮ ಪ್ರೇಮವನ್ನು ಬೇರೆ ವಸ್ತುಗಳ ಮೇಲೆ ಆರೋಪಿಸಿ ಅಭಿವ್ಯಕ್ತಗೊಳಿಸಿದ್ದಾರೆ.

ಮೀರಾಳಲ್ಲಿ ಮಿಲನದ ಆವೇಗ ಮತ್ತು ವಿರಹದ ತೀವ್ರತೆ ಎರಡೂ ಸಮಾನವಾಗಿ ಕಂಡುಬರುತ್ತವೆ. ಆದರೆ, ಮಹಾದೇವಿಯವರಿಗೆ ವಿರಹವೇದನೆಯು ಮಾತ್ರ ಬಲು ಇಷ್ಟವಾಗಿದೆ, ಮಿಲನದಲ್ಲಿ. ಇದೇ ಭಾವನೆಯು ಮಹಾದೇವಿಯವರ ಕಾವ್ಯದಲ್ಲಿ ದಿನ-ದಿನಕ್ಕೆ ತೀವ್ರವಾಗುತ್ತಾ ಸಾಗಿದೆ.

ಇದಕ್ಕೆ ದುಃಖವಾದದ ಪ್ರಭಾವವೆಂದಾಗಲೀ, ಅಥವಾ ನೈತಿಕ ಸಂಕೋಚವೆಂದಾಗಲೀ ಹೇಳಬಹುದು. ಆದರೆ, ವಿರಹದ ಭಾವನೆ ಮಿಲನದ ನಂತರವೇ ತೀವ್ರವಾಗುತ್ತದೆ. ಮಹಾದೇವಿಯವರ ಗೀತೆಗಳಲ್ಲಿಯೂ ಸಹ ಆ ಮಾದಕ ಮಿಲನದ ಸ್ಮೃತಿಯು ಆಗಾಗ್ಗೆ ತೀವ್ರವಾಗುತ್ತದೆ. ಕೆಳಗಿನ ಉದಾಹರಣೆ ನೋಡಿರಿ—

"ಸಖೀ ಈಗ ಸ್ವಪ್ನದ ಮಾತು
ಆಗಿದೆ ಆ ಮಧುವಿನ ಪ್ರಾತಃಕಾಲ
ಯಾವಾಗ ಮುರಲಿಯು ಪಂಚಮ ಸ್ವರವು,
ಮನವನ್ನು ಪುಲಕಿತ, ಅಸ್ಥಿರ
ಮಾಡಿಹೋಗುತ್ತದೆಯೋ,
ಕಂಪಿತವಾಗುತ್ತದೆ ಸುಖದಿಂದ ತುಂಬಿ,
ನವಲತೆಯಂಥ ದೇಹ !
ಯಾವಾಗ ಅವರ ಚಿತವನ(ಕಟಾಕ್ಷದ)ದ ಝುರಿಯು"

ಆದರೆ ಮುಂದೆ ಮಹಾದೇವಿಯವರ ಕಾವ್ಯದಲ್ಲಿ 'ವಿರಹ'ದ ಪ್ರಾಮುಖ್ಯತೆಯೇ ಹೆಚ್ಚಾಗುತ್ತ ಹೋಗಿದೆ. ಕೊನೆಗೆ ಅವರು 'ವಿರಹ'ವನ್ನೇ ತಮ್ಮ 'ಆರಾಧ್ಯ' ಮತ್ತು ದುಃಖವನ್ನೇ ಜೀವನದ ಆಧಾರವೆಂದು ತಿಳಿದಿದ್ದಾರೆ. ಮಹಾದೇವಿಯವರ ಇದೇ ದುಃಖವಾದವು ಅವರನ್ನು ವೈಯಕ್ತಿಕ ಸುಖ-ದುಃಖಗಳನ್ನು ಮೀರಿಸಿ ವಿಶ್ವಜೀವನದೆಡೆಗೆ ಕರೆದೊಯ್ಯುತ್ತದೆ. ಆದರೆ ಮುಗ್ಧ ಮೀರಾಳಿಗೆ ತನ್ನ ಪ್ರಣಯ ಭಾವವನ್ನು ಮಹಾದೇವಿಯವರಂತೆ ಬೌದ್ಧಿಕ ಸಂಯಮ

ದಿಂದ ಬಂಧಿಸಲು ಸಾಧ್ಯವಿದ್ದಿದ್ದಿಲ್ಲ. ಅವಳಂತೂ ಕೇವಲ 'ಗಿರಿಧರ ಗೋಪಾಲ'ನಿಗಾಗಿಯೇ ಜೀವಿಸುತ್ತಿದ್ದಳು ಹಾಗು ಸಾಯುತ್ತಿದ್ದಳು. ಕಣ್ಣುಗಳಲ್ಲಿ ನೆಲೆಸಿದ ಅವಳ ಪ್ರಿಯತಮ (ಸಗುಣಬ್ರಹ್ಮ) ಕ್ರಮೇಣ ಅವಳ ರೋಮ-ರೋಮಗಳಲ್ಲಿ ವ್ಯಾಪಿಸಿ ಹೋಗಿದ್ದನ್ನು. ಮಹಾದೇವಿ ವರ್ಮಾ ಅವರ ಭಾವಾಭಿವ್ಯಕ್ತಿಯ ಮೇಲೂ ಮೀರಾಳ ಪ್ರಭಾವವು ಸ್ಪಷ್ಟವಾಗಿ ಕಂಡುಬರುತ್ತದೆ.

ಮಹಾದೇವಿ ಹಾಗು ಮೀರಾ ಇಬ್ಬರಲ್ಲಿಯೂ ವಿರಹ ಪ್ರೇಮ ಇಲ್ಲವೇ ಪ್ರೇಮದ ವೇದ ಸಮಾನವಾಗಿರುತ್ತದೆ. ಮಹಾದೇವಿಯವರ ಜೀವನವು ಸುಖದ ಹೂವಿನ ಹಾಸಿಗೆಯಾದರೆ ಮೀರಾಳ ಜೀವನವು ಕೊನೆಯ ವರೆಗೆ ಮುಳ್ಳಿನ ಹಾಸಿಗೆ ಮತ್ತು ಅವಳ ಜೀವನದ ಕೊನೆ ಕರುಣಾಪೂರ್ಣವಾಗಿದೆ. ಹಿಂದೀ ಸಾಹಿತ್ಯದಲ್ಲಿ ಈ ಇಬ್ಬರೂ ಚಿರಸ್ಮರಣೀಯರಷ್ಟೇ ಅಲ್ಲದೆ ಪ್ರಾತಃಸ್ಮರಣೀಯರೂ ಆಗಿದ್ದಾರೆ.

## ಉಪಸಂಹಾರ

ಸುಮಾರು ಅರ್ಧಶತಮಾನದಿಂದ ಕಾವ್ಯಸಾಧನೆಯಲ್ಲಿ ನಿರತರಾದ ವಿದುಷಿ ಹಾಗು ಬೌದ್ಧಭಿಕ್ಷುಣಿಯಂತಿದ್ದ ಮಹಾದೇವಿ ವರ್ಮಾ ಅವರು ಹಿಂದೀ ಉರ್ದು, ಸಂಸ್ಕೃತ, ಪಾಲೀ, ಪ್ರಾಕೃತ, ಬಂಗಾಲಿ, ಗುಜರಾತೀ, ಬ್ರಜ, ಆಂಗ್ಲಭಾಷೆ

ಮುಂತಾದ ಭಾಷೆಗಳಲ್ಲಿ ಪಾಂಡಿತ್ಯ ಪಡೆದು ನಿರಂತರವಾಗಿ ಹಿಂದೀ ಸಾಹಿತ್ಯದ, ಸಮಾಜದ, ಪ್ರಯಾಗ ಮಹಿಳಾ ವಿದ್ಯಾ ಪೀಠದ ಹಾಗು ಮಾನವ ಜಾತಿಯ ಅಪೂರ್ವ ಮತ್ತು ನಿಸ್ವಾರ್ಥ ಸೇವೆಗೈಯುತ್ತಾ ಬಂದಿದ್ದಾರೆ. ಅವರ ಮಣಿ ಮಾಣಿಕ್ಯಗಳಂಥ ಅಮೂಲ್ಯ ಸುಧಾರಸಪೂರಿತವಾದ ಗೀತ ಗಳಿಂದ ವಿಶ್ವಜೀವನವು ಸುಖಮಯ ಹಾಗು ಪರಿಪೂರ್ಣವಾಗಿ ಸಾರ್ಥಕವಾಗಲಿ.

ಅಂತರ್ರಾಷ್ಟ್ರೀಯ ಮಹಿಳಾ ವರ್ಷದ ಶುಭ ಪ್ರಸಂಗದಲ್ಲಿ ಉತ್ತರ ಪ್ರದೇಶ ಸರಕಾರದ 'ವಾರ್ತಾ ಮತ್ತು ಪ್ರಸಾರ' ವಿಭಾಗವು ಪ್ರಖ್ಯಾತ ಕವಯಿತ್ರಿ ಶ್ರೀಮತಿ ಮಹಾದೇವಿ ವರ್ಮಾ ಅವರನ್ನು ಕುರಿತು **"ಮಹಾದೇವಿ ವರ್ಮಾ"** ಎಂಬ ವರ್ಣರಂಜಿತ ವೃತ್ತ ಚಿತ್ರವನ್ನು ಚಿತ್ರಿಸಿ ಒಬ್ಬ ವಿಶಿಷ್ಟ ಮಹಿಳಾ ಕವಯಿತ್ರಿಯನ್ನು ಸತ್ಕರಿಸಿದೆ. ಈ ಚಿತ್ರದಲ್ಲಿ ಮಹಾದೇವಿ ಯವರ ಬಾಲ್ಯಕಾಲದಿಂದ ಹಿಡಿದು ವರ್ತಮಾನದ ವರೆಗಿನ ಕಾವ್ಯಮಯ ಜೀವನವನ್ನು ಬಹು ಸುಂದರವಾಗಿ, ಸರಸ ವಾಗಿ ಚಿತ್ರಿಸಲಾಗಿದೆ. ಇದರಿಂದ ಕೇವಲ ಹಿಂದೀ ಸಾಹಿತ್ಯದ ಗೌರವವಷ್ಟೇ ಅಲ್ಲದೇ ವಿಶ್ವಸಾಹಿತ್ಯದ ಗೌರವವೂ ಹೆಚ್ಚಿದೆ.

——

# ಆಧಾರ ಗ್ರಂಥಗಳು

೧) ಹಿಂದೀ ಸಾಹಿತ್ಯ ಕಾ ಆಲೋಚನಾತ್ಮಕ ಇತಿಹಾಸ

೨) ಭಾರತೀಯ ಸಂಸ್ಕೃತಿ ದರ್ಶನ

೩) ಮಹಾದೇವಿ —ಲೇಂ. ಇಂದ್ರನಾಥ ಮದಾನ

೪) ಯಾಮಾ —ಲೇಂ. ಮಹಾದೇವಿ ವರ್ಮಾ

೫) ಆಧುನಿಕ ಸಾಹಿತ್ಯ ಕೀ ಪ್ರವೃತ್ತಿಯಾಂ —ಲೇಂ. ನಾಮವರ ಸಿಂಹ

೬) ಶರಣರ ಅನುಭಾವ ಸಾಹಿತ್ಯ —ಲೇಂ. ಡಾ. ಎಚ್. ತಿಪ್ಪೇರುದ್ರಸ್ವಾಮಿ

---

## ಉಪನ್ಯಾಸ ಗ್ರಂಥಮಾಲೆಯ
## ಇತ್ತೀಚಿನ ಪ್ರಕಟನೆಗಳು

**ಬೆಲೆ : ಪ್ರತಿ ಒಂದಕ್ಕೆ ೨೫ ಪೈಸೆ**

೧. ಹಂಪೆ — ವಸುಂಧರಾ ಫಿಲಿಯೋಜಾ

೨. ಅನುಭವ ಮಂಟಪದ ಶಿವಶರಣೆಯರು — ಶಶಿಕಲಾ ಮೋಳ್ದಿ

೩. ಕಬ್ಬು — ಎಂ. ರಾಮದಾಸ ಕಾಮತ್

೪. ಕುಂಟುತ್ತಿರುವ ಕೈಮಗ್ಗದ ಉದ್ದಿಮೆ — ಈರಣ್ಣ ಹಟ್ಟಿ

೫. ಭಾರತದಲ್ಲಿ ಕುಟುಂಬ ಯೋಜನೆಯ ಯಶಸ್ಸು — ಬಿ. ಎಸ್. ನಂದ್ಯಾಳ

೬. ಪಂಚತಂತ್ರದ ಕಥೆಗಳು — ವರದರಾಜ ಹುಯಿಲಗೋಳ

೭. ಪಂಪಕವಿ ಚಿತ್ರಿಸಿದ ಭೀಷ್ಮರು — ಬಿ. ಸಿ. ಜವಳಿ

೮. ಮದುವೆ ಮತ್ತು ಮಹಿಳೆ — ನೀಲಮ್ಮ ಕತ್ನಳ್ಳಿ

೯. ವೀರಶೈವಾಮೃತ ಮಹಾಪುರಾಣ — ಕಾಶೀಪುಟ್ಟಸೋಮಾರಾಧ್ಯ

೧೦. ದನಗಳ ರೋಗಗಳು ಹಾಗು ಅವುಗಳನಿವಾರಣೋಪಾಯಗಳು — ರಾಮರಾವ ಜ್ಯೋತಿ

---

ಪ್ರಸಾರಾಂಗ: ವ್ಯಾಸಂಗವಿಸ್ತರಣ–ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦ ೦೦೩